# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

# Bapuji Co-Operative Bank Limited, Davangere

## 49th Annual Report & Account 2017-18



# 49ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
## ದಾವಣಗೆರೆ

## ನಿರ್ದೇಶಕ ಮಂಡಲಿ

**ಅಧ್ಯಕ್ಷರು :**

**ಡಾ. ಶಾಮನೂರು ಶಿವಶಂಕರಪ್ಪನವರು**
ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು

**ಉಪಾಧ್ಯಕ್ಷರು :**

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್** ಬಿ.ಕಾಂ.,
ಮಾಜಿ ಸಚಿವರು

**ನಿರ್ದೇಶಕರು :**

**ಶ್ರೀ ಎ. ಎಸ್. ವೀರಣ್ಣ** ಬಿ.ಕಾಂ., ಎಫ್.ಸಿ.ಎ.

**ಡಾ. ಎಂ. ಜಿ. ಈಶ್ವರಪ್ಪ** ಎಂ.ಎ., ಪಿಹೆಚ್.ಡಿ.

**ಡಾ|| ಪಿ. ಶಶಿಕಲಾ** ಎಂ.ಡಿ.

**ಡಾ. ಬಿ. ಪೂರ್ಣಿಮಾ** ಎಂ.ಟೆಕ್., ಪಿಹೆಚ್.ಡಿ.

**ಡಾ. ಶಂಷದ್ ಬೇಗಂ** ಡಿ.ಸಿ.ಸಿ.ಪಿ., ಪಿಹೆಚ್.ಡಿ.

**ಡಾ. ಕೆ. ಹನುಮಂತಪ್ಪ** ಎಂ.ಎ., ಪಿಹೆಚ್.ಡಿ.

**ಡಾ|| ಎ. ಅರುಣ್‌ಕುಮಾರ್** ಎಂ.ಡಿ.

**ಡಾ|| ಸಿ. ವೈ. ಸುದರ್ಶನ್** ಎಂ.ಡಿ., ಡಿ.ಪಿ.ಎಂ.

**ಡಾ|| ಎಂ. ಎಂ. ಲಿಂಗರಾಜ** ಎಂ.ಡಿ.

**ಶ್ರೀ ಕೆ. ಬೊಮ್ಮಣ್ಣ** ಎಂ.ಎ.

**ಶ್ರೀ ಕೆ. ಎಸ್. ವೀರೇಶ್** ಬಿ.ಇ., ಪಿ.ಜಿ., ಡಿ.ಸಿ.ಎ.

**ಡಾ|| ಬಿ. ಎಸ್. ರೆಡ್ಡಿ** ಎಲ್‌ಎಲ್.ಎಂ., ಪಿಹೆಚ್.ಡಿ.

**ಡಾ. ಹೆಚ್. ಶಿವಪ್ಪ** ಎಂ.ಕಾಂ., ಎಲ್‌ಎಲ್.ಬಿ., ಪಿಹೆಚ್.ಡಿ.

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಆಡಳಿತ ಕಛೇರಿ, #120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577 001.**

## 49ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇದರ **2017-2018**ನೇ ಸಾಲಿನ **49**ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ **16-09-2018 ರ ಭಾನುವಾರ** ಮಧ್ಯಾಹ್ನ **12.30** ಗಂಟೆಗೆ ಶಾಮನೂರು ರಸ್ತೆಯಲ್ಲಿರುವ **"ಬಾಪೂಜಿ ಬ್ಯಾಂಕ್ ಸಮುದಾಯ ಭವನ"** ದಲ್ಲಿ ಕರೆದಿರುತ್ತದೆ. ಬ್ಯಾಂಕಿನ ಅಧ್ಯಕ್ಷರೂ, ಮಾಜಿ ಸಚಿವರೂ, ಶಾಸಕರೂ ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳೂ ಆದ **ಡಾ. ಶಾಮನೂರು ಶಿವಶಂಕರಪ್ಪನವರು** ಸಭೆಯ ಅಧ್ಯಕ್ಷತೆ ವಹಿಸುವರು.

ಬ್ಯಾಂಕಿನ ಮಾನ್ಯ ಸದಸ್ಯರು ಈ ಸಭೆಗೆ ವೇಳೆಗೆ ಸರಿಯಾಗಿ ಆಗಮಿಸಿ ಕೆಳಗಿನ ವಿಷಯಗಳ ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳಲು ಕೋರಿದೆ.

## <u>ಸಭೆಯ ಕಾರ್ಯಸೂಚಿ :</u>

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. 2017-2018ನೇ ಸಾಲಿನ ಸಾಮಾನ್ಯ ಸಭೆಯ ನೋಟೀಸ್‌ನ್ನು ಕಾರ್ಯಸೂಚಿಯೊಂದಿಗೆ ಓದಿ ದಾಖಲಿಸುವುದು, ಬ್ಯಾಂಕಿನ ನಿರ್ದೇಶಕ ಮಂಡಲಿಯ ವರದಿಯನ್ನು ಓದಿ ಅಂಗೀಕರಿಸುವುದು.
4. 2017-2018ನೇ ಸಾಲಿನ ಮಾರ್ಚ್ 31ಕ್ಕೆ ಕೊನೆಗೊಂಡಿರುವ ಸನ್ನದು ಲೆಕ್ಕ ಪರಿಶೋಧಕರಿಂದ ಪರಿಶೋಧನೆಯಾದ ವಾರ್ಷಿಕ ಲಾಭ-ನಷ್ಟ ಮತ್ತು ಆಢಾವೆ ಪತ್ರಿಕೆಯನ್ನು ಪರಿಶೀಲಿಸಿ, ಅಂಗೀಕರಿಸುವುದು. ನಿವ್ವಳ ಲಾಭದ ಹಂಚಿಕೆಗೆ ಮಂಜೂರಾತಿ ಕೊಡುವುದು ಮತ್ತು ಲಾಭಾಂಶವನ್ನು ಹಂಚುವ ಪ್ರಮಾಣವನ್ನು ತೀರ್ಮಾನಿಸುವುದು.
5. 2017-2018ನೇ ಸಾಲಿನಲ್ಲಿ ಮಂಜೂರಾದ ಆಯ-ವ್ಯಯದ ಅಂದಾಜಿಗಿಂತ ಹೆಚ್ಚುವರಿಯಾದ ಖರ್ಚುಗಳಿಗೆ ಅನುಮೋದನೆ ಕೊಡುವುದು.
6. 2018-2019ನೇ ಸಾಲಿನ ಆಯ-ವ್ಯಯದ ಅಂದಾಜು ಪತ್ರಿಕೆಯನ್ನು (ಬಡ್ಜೆಟ್‌ನ್ನು) ಓದಿ ಮಂಜೂರು ಮಾಡುವುದು.
7. 2018-2019ನೇ ಸಾಲಿಗೆ ನಿರ್ದೇಶಕ ಮಂಡಲಿಯವರು ರೂಪಿಸಿರುವ ಬ್ಯಾಂಕಿನ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು.
8. ಬ್ಯಾಂಕಿನ ಉಪನಿಯಮಗಳಿಗೆ (Bye-Laws) ಸೂಚಿಸಿರುವ ತಿದ್ದುಪಡಿಗಳನ್ನು ಪರಿಶೀಲಿಸಿ ಅಂಗೀಕರಿಸುವುದು.
9. ಸನ್ನದು ಲೆಕ್ಕ ಪರಿಶೋಧಕರ 2017-2018ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಅಂಗೀಕರಿಸಿ ಅವರ ವರದಿಗೆ ನಿರ್ದೇಶಕ ಮಂಡಲಿಯವರು ಕೊಟ್ಟಿರುವ ಸಮಜಾಯಿಷಿಗಳನ್ನು ಅಂಗೀಕರಿಸುವುದು.
10. 2018-19ನೇ ಸಾಲಿಗೆ ಬ್ಯಾಂಕು ಹೊರಗಿನಿಂದ ಪಡೆಯಬಹುದಾದ ಸಾಲದ ಮಿತಿಯನ್ನು ನಿಗದಿಪಡಿಸುವುದು.
11. 2018-19ನೇ ಸಾಲಿಗೆ ಸನ್ನದು ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವುದು ಮತ್ತು ಅವರ ಸಂಭಾವನೆಯನ್ನು ನಿಗದಿ ಪಡಿಸುವುದು.
12. ಬ್ಯಾಂಕಿನ ಸಂಚಯಗಳನ್ನು ಪರಿಶೀಲಿಸಿ ಅಂಗೀಕರಿಸುವುದು.
13. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

ನಿರ್ದೇಶಕ ಮಂಡಲಿಯ ಪರವಾಗಿ

| | | |
|---|---|---|
| ದಿನಾಂಕ : 26-07-2018 | **ಜಿ. ವಿ. ಶಿವಶಂಕರ್** | **ಡಾ. ಶಾಮನೂರು ಶಿವಶಂಕರಪ್ಪ,** ಅಧ್ಯಕ್ಷರು |
| ದಾವಣಗೆರೆ | ಪ್ರಧಾನ ವ್ಯವಸ್ಥಾಪಕರು | ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು |

**<u>ಸೂಚನೆ :</u>** ಸಾಮಾನ್ಯ ಸಭೆಯಲ್ಲಿ ಮೇಲ್ಕಂಡ ವಿಷಯಗಳ ವಿಚಾರವಾಗಿ ಹೆಚ್ಚಿನ ಮಾಹಿತಿಯ ಅವಶ್ಯಕತೆಯಿದ್ದಲ್ಲಿ ಸಾಮಾನ್ಯ ಸಭೆ ಜರುಗುವ ದಿನಾಂಕದ 5 ದಿವಸಗಳ ಮುಂಚಿತವಾಗಿ ಲಿಖಿತ ಮೂಲಕ ಪ್ರಧಾನ ವ್ಯವಸ್ಥಾಪಕರಿಗೆ ತಿಳಿಸಿದಲ್ಲಿ ಅಧ್ಯಕ್ಷರ ಅನುಮತಿ ಪಡೆದು ಒದಗಿಸಲು ಅವಕಾಶವಿರುತ್ತದೆ.

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಆಡಳಿತ ಕಛೇರಿ, #120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577 001.**

## 49ನೇ ಸಾಲಿನ ವಾರ್ಷಿಕ ವರದಿ (2017-2018)

**ಆತ್ಮೀಯ ಸಹಕಾರಿ ಬಂಧುಗಳೇ,**

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇದರ 49ನೇ ವಾರ್ಷಿಕ ಸಾಮಾನ್ಯ ಸಭೆಗೆ ಬ್ಯಾಂಕಿನ ಸದಸ್ಯರಾದ ತಮ್ಮನ್ನು ಬ್ಯಾಂಕಿನ ನಿರ್ದೇಶಕ ಮಂಡಲಿಯ ಪರವಾಗಿ ಆತ್ಮೀಯವಾಗಿ ಸ್ವಾಗತಿಸುತ್ತಿದ್ದೇನೆ.

2017-2018ನೇ ಸಾಲಿನ 49ನೇ ವರ್ಷದ ಬ್ಯಾಂಕಿನ ನಿರ್ದೇಶಕ ಮಂಡಲಿಯ ವಾರ್ಷಿಕ ಪ್ರಗತಿಯ ವರದಿ, ಸನ್ನದು ಲೆಕ್ಕಪರಿಶೋಧಕರಿಂದ ಪರಿಶೋಧನೆ ಆಗಿರುವ ಲಾಭ-ನಷ್ಟ, ಅಢಾವೆ ಪತ್ರಿಕೆ, ಪ್ರಗತಿಯ ಪಕ್ಷಿನೋಟ ಮುಂತಾದವುಗಳಿಂದ ಕೂಡಿದ ಈ ಪುಸ್ತಕವನ್ನು ಸದಸ್ಯರಿಗೆ ಅಂಚೆಯ ಮೂಲಕ ಕಳುಹಿಸಿದ್ದು ತಾವು ಅವುಗಳನ್ನು ಅವಲೋಕಿಸಿರುವಿರೆಂದು ಭಾವಿಸುತ್ತೇನೆ.

ಸದರಿ ವರ್ಷದಲ್ಲಿ ಬ್ಯಾಂಕು ಒಟ್ಟು ರೂ. 664.83 ಲಕ್ಷ ಲಾಭವನ್ನು ಗಳಿಸಿರುತ್ತದೆ. ಇದರಲ್ಲಿ ಈ ವರ್ಷದ ಆದಾಯ ತೆರಿಗೆ, ಕರಡು ಮತ್ತು ವಿಶೇಷ ಕರಡು ಸಾಲಗಳ ನಿಧಿಗೆ ಅವಕಾಶ ಮಾಡಿದ ನಂತರ ರೂ. 392.94 ಲಕ್ಷ ನಿವ್ವಳ ಲಾಭವನ್ನು ಗಳಿಸಿದೆ.

ಕರ್ನಾಟಕ ರಾಜ್ಯದ ಉನ್ನತ ಮಟ್ಟದ ಕೆಲವೇ ಸಹಕಾರಿ ಪಟ್ಟಣ ಬ್ಯಾಂಕುಗಳಲ್ಲಿ ನಮ್ಮ ಬ್ಯಾಂಕು ಸಹ ಸ್ಥಾನವನ್ನು ಕಾಯ್ದುಕೊಂಡಿರುತ್ತದೆ. ಬ್ಯಾಂಕಿನ ಪ್ರಗತಿಯ ಸಂಕ್ಷಿಪ್ತ ವಿವರಗಳನ್ನು ಕೆಳಗಿನ ಅಂಕಿ ಅಂಶಗಳಿಂದ ತಿಳಿಯಬಹುದಾಗಿದೆ.

**ಸದಸ್ಯರು :**

2016-2017ನೇ ಸಾಲಿನಲ್ಲಿ 10,363 ಜನ ಸದಸ್ಯರಿದ್ದರು. 2017-18ನೇ ಸಾಲಿನಲ್ಲಿ 319 ಜನ ಸದಸ್ಯರು, 116 ಜನ ನಾಮಮಾತ್ರ ಸದಸ್ಯರಾಗಿ ಸೇರ್ಪಡೆಯಾಗಿದ್ದಾರೆ. 156 ಜನ ಸದಸ್ಯರು, 55 ಜನ ಸಹ-ಸದಸ್ಯರು ಮತ್ತು 167 ಜನ ನಾಮಮಾತ್ರ ಸದಸ್ಯರು ತಮ್ಮ ಸದಸ್ಯತ್ವವನ್ನು ವಾಪಸ್ಸು ಪಡೆದಿದ್ದು, ವರ್ಷಾಂತ್ಯಕ್ಕೆ ಒಟ್ಟು 10,420 ಸದಸ್ಯರಿರುತ್ತಾರೆ.

**ಷೇರು ಬಂಡವಾಳ :**

ಈ ಸಾಲಿನಲ್ಲಿ ಷೇರು ಬಂಡವಾಳ ರೂ. 116.27 ಲಕ್ಷ ಸಂಗ್ರಹವಾಗಿದ್ದು, ರೂ. 58.68 ಲಕ್ಷ ಷೇರು ಬಂಡವಾಳ ವಾಪಸ್ಸು ಆಗಿದ್ದು, ವರ್ಷದ ಕೊನೆಗೆ ರೂ. 1,088.34 ಲಕ್ಷ ಇರುತ್ತದೆ. ಸದರಿ ಸಾಲಿನಲ್ಲಿ ಶೇಕಡಾ 5.59 ರಷ್ಟು ಹೆಚ್ಚಾಗಿದೆ.

**ಆಪದ್ಧನ ಮತ್ತು ಇತರೆ ನಿಧಿಗಳು :**

ಒಂದು ಬ್ಯಾಂಕಿನ ಆರ್ಥಿಕ ಭದ್ರತೆಯನ್ನು ಅಳೆಯಲು ಆ ಬ್ಯಾಂಕಿನ ಸ್ವಂತ ಬಂಡವಾಳ, ಕೂಡಿಟ್ಟಿರುವ ಆಪದ್ಧನ ಮತ್ತು ನಿಧಿಗಳು ಕಾರಣವಾಗಿರುತ್ತವೆ. ಬ್ಯಾಂಕಿನ ಆಪದ್ಧನ, ಕಟ್ಟಡ ನಿಧಿ, ಕರಡು ನಿಧಿ ಮುಂತಾದ ನಿಧಿಗಳು ಗಣನೀಯವಾಗಿ ಹೆಚ್ಚಳವಾಗಿರುತ್ತವೆ. ಬ್ಯಾಂಕಿನಲ್ಲಿ ಆಪದ್ಧನ ನಿಧಿ ರೂ. 4,488.30 ಲಕ್ಷ ಇದ್ದು ಮತ್ತು ಇನ್ನಿತರ ನಿಧಿಗಳ ಕೂಡಿಟ್ಟ ಮೊತ್ತ ರೂ. 4,953.53 ಲಕ್ಷ ಇರುತ್ತವೆ. ವರ್ಷದ ಕೊನೆಗೆ ಒಟ್ಟು ಮೊತ್ತ ರೂ. 9,441.83 ಲಕ್ಷ ಇರುತ್ತದೆ. ಗಳಿಸಿದ ನಿವ್ವಳ ಲಾಭದಲ್ಲಿ ಶೇಕಡಾ 40 ರಷ್ಟನ್ನು ಆಪದ್ಧನ ನಿಧಿಗೆ ವರ್ಗಾಯಿಸಿದೆ. ಈ ಸಾಲಿನಲ್ಲಿ ಶೇಕಡಾ 3.70 ರಷ್ಟು ಹೆಚ್ಚಾಗಿದೆ. ಈ ನಿಧಿಗಳು ಬ್ಯಾಂಕಿನ ಭದ್ರತೆಯ ಪ್ರತೀಕವಾಗಿವೆ.

**ದುಡಿಯುವ ಬಂಡವಾಳ :**

ಬ್ಯಾಂಕಿನ ದುಡಿಯುವ ಬಂಡವಾಳ ಈ ಸಾಲಿನಲ್ಲಿ ರೂ. 63,704.56 ಲಕ್ಷದಷ್ಟು ಇರುತ್ತದೆ. ಈ ಸಾಲಿನಲ್ಲಿ ರೂ. 1,840.91 ಲಕ್ಷದಷ್ಟು ಹೆಚ್ಚಾಗಿರುತ್ತದೆ.

**ಲಾಭ ಮತ್ತು ಲಾಭದ ವಿಂಗಡಣೆ :**

2017–2018ನೇ ಸಾಲಿನಲ್ಲಿ ಬ್ಯಾಂಕಿನ ಆದಾಯ ಒಟ್ಟು ರೂ. 5,091.06 ಲಕ್ಷ ಗಳಿಸಿದ್ದು, ಖರ್ಚು ಮತ್ತು ಆದಾಯ ತೆರಿಗೆ ಅವಕಾಶಗಳಿಗೆ ಮೊಬಲಗನ್ನು ತೆಗೆದಿರಿಸಿ ರೂ. 392.94 ಲಕ್ಷ ನಿವ್ವಳ ಲಾಭವನ್ನು ಗಳಿಸಿದೆ. ನಿವ್ವಳ ಲಾಭವನ್ನು ಕೆಳಗಿನಂತೆ ವಿಂಗಡಿಸಲು ಆಡಳಿತ ಮಂಡಲಿಯವರು ತೀರ್ಮಾನಿಸಿ ಸಾಮಾನ್ಯ ಸಭೆಯ ಅಂಗೀಕಾರಕ್ಕಾಗಿ ಶಿಫಾರಸ್ಸು ಮಾಡಿರುತ್ತಾರೆ. ಈ ಸಾಲಿನಲ್ಲಿ ಶೇಕಡಾ 18 ರಂತೆ ಲಾಭಾಂಶವನ್ನು ಈ ಸಭೆಯ ಅನುಮತಿ ಪಡೆದು ಷೇರುದಾರರಿಗೆ ಕೊಡಬಹುದೆಂದು ಮಹಾಸಭೆಗೆ ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಲಾಭ ವಿಂಗಡಣೆ ವಿವರಗಳು ಈ ಕೆಳಗಿನಂತೆ ಇರುತ್ತವೆ.

| ಕ್ರ.ಸಂ. | ವಿವರ | ಮೊಬಲಗು |
|---|---|---|
| 1. | ಮೀಸಲು ನಿಧಿ (ಆಪದ್ಧನ) ಶೇ. 40 ರಂತೆ | 1,57,17,609-00 |
| 2. | ಸಹಕಾರಿ ಶಿಕ್ಷಣ ನಿಧಿ ಶೇ. 2 ರಂತೆ | 4,71,528-00 |
| 3. | ಸಹಕಾರ ಅಭಿವೃದ್ಧಿ ನಿಧಿ ಶೇ. 1 ರಂತೆ | 2,35,764-00 |
| 4. | ಕಟ್ಟಡ ನಿಧಿ | 5,00,000-00 |
| 5. | ಸಾರ್ವಜನಿಕ ಒಳಿತು ನಿಧಿ | 5,00,000-00 |
| 6. | ಸಿಬ್ಬಂದಿ ಕ್ಷೇಮ ನಿಧಿ | 3,00,000-00 |
| 7. | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 5,00,000-00 |
| 8. | ಲಾಭಾಂಶ ಶೇ. 18 ರಂತೆ | 1,88,99,906-00 |
| 9. | ಗುಂತಾಯಿಸಿದ ಹಣದ ಏರಿಳಿತ ನಿಧಿ | 11,00,000-00 |
| 10. | ಸುವರ್ಣ ಮಹೋತ್ಸವ ನಿಧಿ | 10,50,000-00 |
| | ಉಳಿದ ಮೊಬಲಗು ಪುನಃ ಮೀಸಲು ನಿಧಿಗೆ | 19,217-57 |
| | ಒಟ್ಟು ರೂ. | **3,92,94,024-57** |

ಮೇಲ್ಕಂಡಂತೆ ನಿವ್ವಳ ಲಾಭದ ವಿಂಗಡಣೆಯಾದ ನಂತರ ಬ್ಯಾಂಕಿನ ನಿಧಿಗಳು ಈ ಕೆಳಗಿನಂತೆ ಇರುತ್ತವೆ.

| ಕ್ರ.ಸಂ. | ವಿವರ | ಮೊಬಲಗು |
|---|---|---|
| 1. | ಮೀಸಲು ನಿಧಿ (ಆಪದ್ಧನ) | 46,45,67,196-45 |
| 2. | ಕಟ್ಟಡ ನಿಧಿ | 5,52,81,656-70 |
| 3. | ಲಾಭಾಂಶ ಸಮೀಕರಣ ನಿಧಿ | 1,66,45,491-55 |
| 4. | ಸಾರ್ವಜನಿಕ ಒಳಿತು ನಿಧಿ | 1,39,28,329-79 |
| 5. | ಕರಡು ಸಾಲಗಳ ನಿಧಿ | 29,25,87,055-00 |
| 6. | ಪ್ರಮಾಣಿತ ಆಸ್ತಿಗಳ ಮೇಲೆ ಕಾಯ್ದಿರಿಸುವಿಕೆ | 77,43,015-27 |
| 7. | ಸಿಬ್ಬಂದಿ ಕ್ಷೇಮ ನಿಧಿ | 2,68,04,369-78 |
| 8. | ಗುಂತಾಯಿಸಿದ ಹಣದ ಸವಕಳಿ ನಿಧಿ | 3,46,05,200-00 |
| 9. | ಗುಂತಾಯಿಸಿದ ಹಣದ ಏರಿಳಿತ ನಿಧಿ | 3,59,32,000-00 |
| 10. | ಕರಡು ಸಾಲಗಳ ವಿಶೇಷ ನಿಧಿ | 1,27,25,389-00 |
| 11. | ಸುವರ್ಣ ಮಹೋತ್ಸವ ನಿಧಿ | 30,50,000-00 |
| | ಒಟ್ಟು ರೂ. | **96,38,69,703-54** |

BAPUJI CO-OPERATIVE BANK LIMITED DAVANGERE

**ಠೇವಣಿಗಳು :**

2017-2018ನೇ ಸಾಲಿಗೆ ಬ್ಯಾಂಕಿನಲ್ಲಿ ಎಲ್ಲಾ ರೀತಿಯ ಠೇವಣಿಗಳ ಒಟ್ಟು ಮೊತ್ತ ರೂ. 52,467.41 ಲಕ್ಷ ಇದೆ. ಈ ಸಾಲಿನಲ್ಲಿ ರೂ. 1,469.95 ಲಕ್ಷದಷ್ಟು ಹೆಚ್ಚಿಗೆ ಠೇವಣಿ ಸಂಗ್ರಹವಾಗಿದೆ. ಅಂದರೆ ಶೇಕಡಾ 2.88 ರಷ್ಟು ಹೆಚ್ಚಾಗಿದೆ. ಠೇವಣಿಗಳ ಮೇಲಿನ ಬಡ್ಡಿ ದರಗಳನ್ನು ಠೇವಣಿದಾರರಿಗೆ ಅನುಕೂಲವಾಗುವಂತೆ ಪರಿಷ್ಕೃತಗೊಳಿಸಿದೆ. ಹಿರಿಯ ನಾಗರಿಕರಿಗೆ ಶೇಕಡಾ 0.50 ರಷ್ಟು ಹೆಚ್ಚಿಗೆ ಇದೆ. ರೂ. 25 ಲಕ್ಷ ಠೇವಣಿಯನ್ನು ಒಂದೇ ಇಡಿಗಂಟಿನಲ್ಲಿ ಜಮಾಗೊಳಿಸಿದವರಿಗೆ ಶೇಕಡಾ 0.50 ಬಡ್ಡಿಯನ್ನು ಹೆಚ್ಚಿಗೆ ಕೊಡುತ್ತದೆ. ದಿನವಹಿ ಬ್ಯಾಲೆನ್ಸ್ ಮೇಲೆ ಸೇವಿಂಗ್ಸ್ ಖಾತೆಗೆ ಶೇಕಡಾ 4 ರಂತೆ ಬಡ್ಡಿ ಕೊಡುತ್ತದೆ. ಡಿಪಾಜಿಟ್ ಇನ್ಸೂರೆನ್ಸ್ ಸ್ಕೀಮ್ ನಮ್ಮ ಬ್ಯಾಂಕಿಗೂ ರೂಪಾಯಿ ಒಂದು ಲಕ್ಷದವರೆಗಿನ ಠೇವಣಿಗಳಿಗೆ ಅನ್ವಯಿಸುತ್ತದೆ. ಮಾನ್ಯ ಗ್ರಾಹಕರು, ಠೇವಣಿದಾರರು ಇನ್ನೂ ಹೆಚ್ಚಿನ ರೀತಿಯಲ್ಲಿ ಠೇವಣಿಗಳನ್ನು ಜಮಾ ಮಾಡಿ ಬ್ಯಾಂಕಿನ ಪ್ರಗತಿಯಲ್ಲಿ ಪಾಲ್ಗೊಳ್ಳಲು ಕೇಳಿಕೊಂಡಿದೆ.

**ಪ್ರವಾಹೀ ಧನ :**

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಇವರ ನಿರ್ದೇಶನದಂತೆ ಬ್ಯಾಂಕಿನಲ್ಲಿ ನಿರಂತರವಾಗಿ ಸಿ.ಆರ್.ಆರ್. (CRR) ಮತ್ತು ಎಸ್.ಎಲ್.ಆರ್. (SLR) ಬ್ಯಾಲನ್ಸ್‌ಗಳನ್ನು ಪ್ರತಿ ದಿನವೂ ಕಾಯ್ದುಕೊಂಡಿದೆ. ಬ್ಯಾಂಕಿನ ಸಿ.ಆರ್.ಎ.ಆರ್.(CRAR) ಪ್ರಮಾಣ ಶೇಕಡಾ 31.87 ರಷ್ಟು ಇರುತ್ತದೆ.

**ಸಾಲ ಮತ್ತು ಮುಂಗಡಗಳು :**

ಈ ಸಾಲಿನಲ್ಲಿ ಬ್ಯಾಂಕಿನ ಸದಸ್ಯರಿಗೆ ವಿವಿಧ ಉದ್ದೇಶಗಳಿಗೆ ಮತ್ತು ಸಾಲದ ಮರುಪಾವತಿಯ ಸಾಮರ್ಥ್ಯವನ್ನು ಪರಿಗಣಿಸಿ ನಿರ್ದೇಶಕ ಮಂಡಲಿಯವರು ಮತ್ತು ಸಾಲದ ಸಮಿತಿ ವಿವಿಧ ಸಾಲಗಳನ್ನು ಮಂಜೂರು ಮಾಡಿರುತ್ತಾರೆ. ದಿನಾಂಕ 31-03-2018 ರಂದು ಬ್ಯಾಂಕಿಗೆ ಬರಬೇಕಾದ ಸಾಲದ ಮೊತ್ತ ರೂ. 18,973.10 ಲಕ್ಷ ಇದೆ. ಇದು ಕಳೆದ ವರ್ಷ ರೂ. 17,721.96 ಲಕ್ಷ ಇದ್ದು ಸದರಿ ಸಾಲಿನಲ್ಲಿ ರೂ. 1,251.14 ಲಕ್ಷದಷ್ಟು ಹೆಚ್ಚಿಗೆ ಆಗಿದೆ. ಸಿ.ಡಿ. ರೇಶಿಯೋ ಶೇಕಡಾ 36.16 ರಷ್ಟು ಇದೆ. ನಿಗದಿಪಡಿಸಿದ ವೇಳೆಗೆ ಸರಿಯಾಗಿ ಸಾಲದ ಕಂತನ್ನು ಬಡ್ಡಿ ಸಮೇತ ಮರುಪಾವತಿ ಮಾಡಿದಲ್ಲಿ ಬಡ್ಡಿ ದರದಲ್ಲಿ ರಿಯಾಯಿತಿ ಕೊಡಲಾಗುತ್ತದೆ. ಕೈಗಾರಿಕಾ ಉದ್ಯಮದಾರರಿಗೆ, ವಾಣಿಜ್ಯೋದ್ಯಮಿಗಳಿಗೆ, ಚಿಕ್ಕ ವ್ಯಾಪಾರಸ್ಥರಿಗೆ, ವಾಹನಗಳನ್ನು ಕೊಳ್ಳಲು, ಗೃಹನಿರ್ಮಾಣ ಮಾಡುವವರಿಗೆ ಅಲ್ಲದೇ ಮನೆ ರಿಪೇರಿ, ನವೀಕರಣ ಮಾಡಲು, ನಿವೇಶನ ಖರೀದಿಸಲು ಮತ್ತಿತರ ಕಾರಣಗಳಿಗೆ ಅಲ್ಪಾವಧಿ, ಮದ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ವಿತರಿಸಿದೆ. ವೇತನ ಆಧಾರಿತ ಸಾಲಗಳು ಮತ್ತು ಬಂಗಾರದ ಒಡವೆಗಳ ಮೇಲೆ ಸಹ ಸಾಲಗಳನ್ನು ಮಂಜೂರು ಮಾಡಿದೆ. ಮಾನ್ಯ ಸದಸ್ಯರು ಹೆಚ್ಚಿನ ರೀತಿಯಲ್ಲಿ ಸಾಲಗಳ ಸೌಲಭ್ಯಗಳನ್ನು ಪಡೆದು ಆರ್ಥಿಕವಾಗಿ ಉನ್ನತಿಯನ್ನು ಸಾಧಿಸಲು ಕೋರಿದೆ.

ಈ ಸಾಲಿನಲ್ಲಿ ಆದ್ಯತಾ ವಲಯಕ್ಕೆ ಶೇಕಡಾ 60.89 ರಷ್ಟು ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡಾ 8.11 ರಷ್ಟು ಸಾಲಗಳನ್ನು ಮಂಜೂರು ಮಾಡಿದೆ.

**ಸುಸ್ತಿ ಸಾಲಗಳು ಮತ್ತು ನಿಷ್ಕ್ರಿಯ ಆಸ್ತಿಗಳು :**

ಬ್ಯಾಂಕಿನಲ್ಲಿ 2018ರ ಮಾರ್ಚ್ 31ಕ್ಕೆ ಸುಸ್ತಿ ಸಾಲಗಳು ರೂ. 1,495.36 ಲಕ್ಷದಷ್ಟು ಇದೆ. ಅಂದರೆ ಒಟ್ಟು ಸಾಲಗಳ ಮೇಲೆ ಶೇಕಡಾ 7.88 ರಷ್ಟು ಇದೆ ಮತ್ತು ನಿಷ್ಕ್ರಿಯ ಆಸ್ತಿ (ಎನ್.ಪಿ.ಎ.) ರೂ. 1,713.06 ಲಕ್ಷ ಇದೆ. ಇದು ಒಟ್ಟು ಸಾಲಗಳ ಮೇಲೆ ಶೇಕಡಾ 9.03 ರಷ್ಟು ಇದೆ. ನಿವ್ವಳ ನಿಷ್ಕ್ರಿಯ ಆಸ್ತಿ 0% ಇದೆ. ಸುಸ್ತಿ ಸಾಲದ ಖಾತೆಗಳನ್ನು ಹೊಂದಿದ ಸದಸ್ಯರು ಕೂಡಲೇ ಸಾಲ ಮತ್ತು ಬಡ್ಡಿಯನ್ನು ಬ್ಯಾಂಕಿಗೆ ಜಮಾ ಮಾಡಲು ಕೋರಿದೆ. ಇಲ್ಲವಾದಲ್ಲಿ ಅಂತಹ ಖಾತೆದಾರರ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಬೇಕಾಗುತ್ತದೆ. ಇದನ್ನು ಸುಸ್ತಿ ಸಾಲಗಾರರು ತಿಳಿದುಕೊಂಡು ತಮ್ಮ ಸಾಲಗಳನ್ನು ಮರುಪಾವತಿ ಮಾಡಲು ಹೆಚ್ಚಿನ ಆದ್ಯತೆ ಕೊಡುವಂತೆ ಕೇಳಿಕೊಳ್ಳಲಾಗಿದೆ.

**ಬ್ಯಾಂಕಿನ ಸಂಚಯಗಳು :**

ಬ್ಯಾಂಕಿನ ಸಂಚಯಗಳ ಮೊತ್ತ ರೂ. 40,287.21 ಲಕ್ಷ ಇದೆ. ರಿಸರ್ವ್ ಬ್ಯಾಂಕಿನ ಆದೇಶದಂತೆ ಸಂಚಯಗಳನ್ನು ಸರಕಾರಿ ಪತ್ರಗಳಲ್ಲಿ, ಬಾಂಡ್‌ಗಳಲ್ಲಿ, ಬ್ಯಾಂಕುಗಳ ಖಾಯಂ ಠೇವಣಿಗಳಲ್ಲಿ, ಮ್ಯೂಚುಯಲ್ ಫಂಡ್‌ಗಳಲ್ಲಿ ಲಾಭದಾಯಕವಾಗಿ ತೊಡಗಿಸಲಾಗಿದೆ.

**ವಿವರಗಳು :**

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ವಿವರಗಳು | ಮೊಬಲಗು |
|---|---|---|
| 1. | ಇತರೆ ಬ್ಯಾಂಕುಗಳಲ್ಲಿ ಖಾಯಂ ಠೇವಣಿಗಳು | 20,087.80 |
| 2. | ಸರ್ಕಾರಿ ಸೆಕ್ಯೂರಿಟಿ ಪತ್ರಗಳಲ್ಲಿ | 16,788.40 |
| 3. | ಷೇರು ಮತ್ತು ಇತರೆ ತೊಡಗಣೆಗಳು | 3,411.01 |
| | ಒಟ್ಟು ರೂ. | 40,287.21 |

**ಆಯ-ವ್ಯಯ :**

2017-2018ನೇ ಸಾಲಿನಲ್ಲಿ ಇತರೆ ಖರ್ಚು ರೂ. 1,27,961.00 ಮಂಜೂರಾದ ಬಡ್ಜೆಟ್‌ಗಿಂತ ಹೆಚ್ಚಾಗಿರುತ್ತದೆ. ಇವುಗಳ ಮಂಜೂರಾತಿಗಾಗಿ ಕೋರಿದೆ. 2018-2019ನೇ ಸಾಲಿನ ಆಯ-ವ್ಯಯ ಮಂಜೂರಾತಿ ಪತ್ರಿಕೆಯನ್ನು ತಮ್ಮ ಮಂಜೂರಾತಿಗಾಗಿ ಮಂಡಿಸಿದೆ.

**2018-2019ನೇ ಸಾಲಿಗೆ ಉದ್ದೇಶಿತ ಕಾರ್ಯ ಚಟುವಟಿಕೆಗಳು :**

1. ಠೇವಣಿ ಸಂಗ್ರಹಣೆಯನ್ನು ಹೆಚ್ಚಿಸುವುದು ಮತ್ತು ಸದಸ್ಯರಿಗೆ ಹೆಚ್ಚಿನ ಸಾಲ ಸೌಲಭ್ಯ ನೀಡಿ ಹೆಚ್ಚಿನ ಪ್ರಗತಿಯನ್ನು ಕಾಯ್ದುಕೊಳ್ಳುವುದು.
2. ಕಟ್‌ಬಾಕಿಗಳನ್ನು ವಸೂಲು ಮಾಡಿ ಬ್ಯಾಂಕಿನ ಎನ್.ಪಿ.ಎ. ಸಾಲಗಳನ್ನು ಕಡಿಮೆ ಮಾಡುವುದು.
3. ಅವಶ್ಯವಿದ್ದ ಸ್ಥಳಗಳಲ್ಲಿ ಬ್ಯಾಂಕಿನ ಶಾಖೆಗಳನ್ನು ಮತ್ತು ಎ.ಟಿ.ಎಂ.ಗಳನ್ನು ಸ್ಥಾಪಿಸುವುದು.

**ಲೆಕ್ಕ ಪರಿಶೋಧನೆ :**

2017-2018ನೇ ಸಾಲಿನ ವಾರ್ಷಿಕ ಬ್ಯಾಂಕಿನ ಲೆಕ್ಕ ಪತ್ರಗಳ ಪರಿಶೋಧನೆಯು ಸನ್ನದು ಲೆಕ್ಕ ಪರಿಶೋಧಕರಾದ ಶ್ರೀ ಲಿಂಗರಾಜು ವಿ. ಚಾರ್ಟರ್ಡ್ ಅಕೌಂಟೆಂಟ್, ದಾವಣಗೆರೆ ಇವರಿಂದ ಪರಿಶೋಧನೆಯಾಗಿ ವರದಿಯನ್ನು ಕೊಟ್ಟಿರುತ್ತಾರೆ. ಅವರ ವರದಿಗೆ ಅನುಪಾಲನಾ ವರದಿಯನ್ನು ಅನುಮೋದಿಸಿ ತಮ್ಮ ಅಂಗೀಕಾರಕ್ಕಾಗಿ ಈ ಸಭೆಯಲ್ಲಿ ಮಂಡಿಸಿದೆ.

ಸಮವರ್ತಿ ಲೆಕ್ಕಪರಿಶೋಧನೆಯನ್ನು ಮೆ॥ ಶಾಂತಪ್ಪ ಅಂಡ್ ಕೋ., ಚಾರ್ಟರ್ಡ್ ಅಕೌಂಟೆಂಟ್ಸ್, ದಾವಣಗೆರೆ ಇವರು ಕೈಗೊಂಡು ತ್ರೈಮಾಸಿಕ ವರದಿಗಳನ್ನು ಕೊಟ್ಟಿರುತ್ತಾರೆ. ಐ.ಎಸ್./ಇ.ಡಿ.ಪಿ. ಆಡಿಟ್‌ನ್ನು ಮೆ॥ ಸಿಸ್‌ಫೋಕಾನ್, ಬೆಂಗಳೂರು ಇವರಿಂದ ಆಗಿರುತ್ತದೆ.

ಬ್ಯಾಂಕು ಈ ಸಾಲಿನಲ್ಲಿಯೂ "ಎ" ವರ್ಗದ ಆಡಿಟ್ ಶ್ರೇಣಿಯಲ್ಲಿ ಮುಂದುವರೆದಿದೆ.

ಬ್ಯಾಂಕಿನ ಪ್ರಗತಿಗೆ ಸತತವಾಗಿ ಶ್ರಮಿಸುತ್ತಿರುವ ಬ್ಯಾಂಕ್ ಸಿಬ್ಬಂದಿಯವರಿಗೆ ವಿವಿಧ ಉದ್ದೇಶಕ್ಕಾಗಿ ಸಾಲಗಳು ಮತ್ತು ಅನೇಕ ಸೌಲಭ್ಯಗಳನ್ನು ಕಲ್ಪಿಸಿದೆ. ಸಿಬ್ಬಂದಿಯವರನ್ನು ತರಬೇತಿ ಪಡೆಯಲು ತರಬೇತಿ ಶಿಬಿರಗಳಿಗೆ ಕಳುಹಿಸಲಾಗಿರುತ್ತದೆ.

ಸಾರ್ವಜನಿಕ ಒಳಿತು ನಿಧಿಯಿಂದ ಬ್ಯಾಂಕಿನ ಸದಸ್ಯರು ಮೃತರಾದಲ್ಲಿ ಅವರ ವಾರಸುದಾರರಿಗೆ ರೂ. 5,000/-ರಂತೆ ಧನ ಸಹಾಯವನ್ನು ವಿತರಿಸಿದೆ.

ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ ಉತ್ತಮ ಸೇವೆಯನ್ನು ಒದಗಿಸಲು ಬ್ಯಾಂಕಿನ ಎಲ್ಲಾ ಶಾಖೆಗಳಿಗೂ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ ಹಾಗೂ ಸಿ.ಟಿ.ಎಸ್.-2010 ಕ್ಲಿಯರಿಂಗ್‌ಗೆ ಐ.ಡಿ.ಬಿ.ಐ. ಬ್ಯಾಂಕಿನ ಪ್ರಾಯೋಜಕತ್ವ (Sponsor Bank) ದ ಉಪಸದಸ್ಯತ್ವ (Sub Membership) ವನ್ನು ಪಡೆದಿರುತ್ತದೆ ಇದರಿಂದ ಐ.ಡಿ.ಬಿ.ಐ. ಬ್ಯಾಂಕಿನೊಂದಿಗೆ ಒಡಂಬಡಿಕೆ ಮಾಡಿಕೊಂಡು ಪ್ರಾರಂಭಿಸಿದ್ದೇವೆ. ನಮ್ಮ ಬ್ಯಾಂಕಿನ ರೂಪೇ ಕಾರ್ಡ್‌ನಿಂದ (Rupay Debit Card) ಗ್ರಾಹಕರು ದೇಶದ ಎಲ್ಲಾ ಬ್ಯಾಂಕಿನ ಎ.ಟಿ.ಎಂ. ಕೇಂದ್ರಗಳಲ್ಲಿ ಹಣವನ್ನು ಪಡೆಯಬಹುದು ಮತ್ತು ಪಾಯಿಂಟ್ ಆಫ್ ಸೇಲ್ (Point of Sale) ಮುಖಾಂತರ ವ್ಯವಹರಿಸಬಹುದು ಹಾಗೂ ಆರ್.ಟಿ.ಜಿ.ಎಸ್. / ನೆಫ್ಟ್ (RTGS / NEFT) ಸೌಲಭ್ಯವನ್ನು ನಮ್ಮ ಬ್ಯಾಂಕಿನ ಸ್ವಂತ IFSC ಕೋಡ್ ನಂ. IBKL0364BCB ಮುಖಾಂತರ ಗ್ರಾಹಕರು ನೇರವಾಗಿ ತಮ್ಮ ಖಾತೆಗಳಿಗೆ ಹಣ ವರ್ಗಾವಣೆ ಸೌಲಭ್ಯಗಳನ್ನು ಪಡೆಯಬಹುದು.

ರಾಜ್ಯದ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಹೆಚ್ಚು ಸ್ವಂತ ಬಂಡವಾಳ ಹೊಂದಿರುವ ಬ್ಯಾಂಕ್ ಆಗಿದ್ದು, ಈ ಸಾಧನೆಗೆ ಬ್ಯಾಂಕಿನ ಅಧ್ಯಕ್ಷರು, ಮಾಜಿ ಸಚಿವರು, ಶಾಸಕರು ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳೂ ಆದ ಡಾ. ಶಾಮನೂರು ಶಿವಶಂಕರಪ್ಪನವರ ಪರಿಶ್ರಮ, ದೂರದೃಷ್ಠಿ ಮತ್ತು ಅಚಲ ವಿಶ್ವಾಸದಿಂದ ಕೂಡಿದ ಅವರು ಈ ಬ್ಯಾಂಕಿನ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಶ್ರೀಯುತರು ಹೃದಯ ಶ್ರೀಮಂತಿಕೆಯ ವ್ಯಕ್ತಿತ್ವದವರು, ಶಿಕ್ಷಣ ಪ್ರೇಮಿಗಳು, ಜನಪ್ರಿಯ ಶಾಸಕರು, ಸಮರ್ಥ ಆಡಳಿತಗಾರರು, ಚತುರ ವಾಣಿಜ್ಯೋದ್ಯಮಿಗಳು, ಸುಪ್ರಸಿದ್ದ ಕೈಗಾರಿಕೋದ್ಯಮಿಗಳು, ಮುತ್ಸದ್ದಿ ರಾಜಕಾರಣಿಗಳು, ಧರ್ಮಚೂಡಾಮಣಿ, ಅಜಾತಶತ್ರು, ನಗರದ ಶಿಕ್ಷಣ ನಿರ್ಮಾತೃ, ಕೊಡುಗೈದಾನಿಗಳು, ಶತಮಾನದ ಶ್ರೇಷ್ಠರು, ಬಡವರ ಬಂಧು, ನಿತ್ಯ ಸೇವಾಯಜ್ಞಧಾರಿ, ಸರ್ವಸಮಾಜಗಳ ರಕ್ಷಕರು, ಸೃಜನಶೀಲರು, ಅಮೃತಪುರುಷ, ಕ್ರಿಯಾಶೀಲ, ಕ್ರೀಡಾ ಪ್ರೇಮಿಗಳು, ವಿದ್ಯಾಸೇವಾ ಸಾಗರ, ಜನಸೇವಕ ಮುಂತಾದ ಹೆಸರಿನಿಂದ ಕರೆಸಿಕೊಳ್ಳುವವರಾಗಿದ್ದು, ಅಭಿವೃದ್ಧಿಯ ಹರಿಕಾರರಾಗಿದ್ದಾರೆ. ಅವರು ಬ್ಯಾಂಕಿನ ಪ್ರಗತಿಗೋಸ್ಕರ ನಿರಂತರ ಚಿಂತನೆವುಳ್ಳವರಾಗಿದ್ದು, ಶ್ರೀಯುತರ ಅಮೂಲ್ಯ ಸೇವೆಯನ್ನು ಬ್ಯಾಂಕು ಪ್ರಾರಂಭದಿಂದಲೂ ಅವ್ಯಾಹತವಾಗಿ ಪಡೆಯುತ್ತಾ ಬಂದಿದೆ. ಶ್ರೀಯುತರು ಕರ್ನಾಟಕ ರಾಜ್ಯದ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾಗಿ ಕಾರ್ಯನಿರ್ವಹಿಸಿರುವುದು ನಮ್ಮ ಬ್ಯಾಂಕಿಗೆ ಹೆಮ್ಮೆಯ ವಿಷಯವಾಗಿದೆ.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಯುತ ಎಸ್. ಎಸ್. ಮಲ್ಲಿಕಾರ್ಜುನ್‌ರವರು ಬ್ಯಾಂಕಿನ ಅಭಿವೃದ್ಧಿಗಾಗಿ ವಿಶೇಷ ಆಸಕ್ತಿವುಳ್ಳವರಾಗಿದ್ದಾರೆ. ಬ್ಯಾಂಕಿನ ನಿರ್ದೇಶಕರುಗಳು ಬ್ಯಾಂಕಿನ ಸಾಧನೆಗೆ ಹೆಚ್ಚಿನ ಕಾಳಜಿಯನ್ನು ವಹಿಸಿದ್ದು ಎಲ್ಲಾ ಕಾರ್ಯಗಳಲ್ಲಿ ವಿಶೇಷ ಆಸಕ್ತಿಯೊಂದಿಗೆ ಭಾಗವಹಿಸುತ್ತಿದ್ದಾರೆ. ಬ್ಯಾಂಕಿನ ಸಿಬ್ಬಂದಿಯವರ ಸೇವೆ ಸಹ ಉನ್ನತ ಮಟ್ಟದ್ದಾಗಿದೆ.

**ಕೃತಜ್ಞತೆಗಳು :**

ಬಾಪೂಜಿ ವಿದ್ಯಾಸಂಸ್ಥೆಯವರು ತಮ್ಮ ಎಲ್ಲಾ ಠೇವಣಿಗಳನ್ನು ನಮ್ಮ ಬ್ಯಾಂಕಿನಲ್ಲಿ ತೊಡಗಿಸಿದ್ದಾರೆ. ಸಂಸ್ಥೆಯ ಎಲ್ಲಾ ಆರ್ಥಿಕ ವ್ಯವಹಾರಗಳು ನಮ್ಮ ಬ್ಯಾಂಕಿನ ಮುಖಾಂತರವೇ ನಡೆಯುತ್ತವೆ. ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಿಗೂ, ಅಧ್ಯಕ್ಷರಿಗೂ ಹಾಗೂ ಎಲ್ಲಾ ಪದಾಧಿಕಾರಿಗಳಿಗೂ ನಾವು ಅಭಿಮಾನ ಪೂರ್ವಕವಾಗಿ ಕೃತಜ್ಞತೆ ಸಲ್ಲಿಸುತ್ತೇವೆ.

ಉಪಯುಕ್ತ ಸಲಹೆ, ಸೂಚನೆಗಳನ್ನು ಕಾಲಕಾಲಕ್ಕೆ ಸರಿಯಾಗಿ ಸಮಯೋಚಿತವಾಗಿ ಕೊಡುತ್ತಿರುವ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೂ, ಸಹಕಾರಿ ಸಂಘಗಳ ಇಲಾಖೆ ಮತ್ತು ಲೆಕ್ಕಪರಿಶೋಧನಾ ಇಲಾಖೆಯ ಅಧಿಕಾರಿಗಳಿಗೂ, ರಾಜ್ಯದ ಪಟ್ಟಣ ಸಹಕಾರಿ ಬ್ಯಾಂಕುಗಳ ಒಕ್ಕೂಟ, ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟ, ರಾಜ್ಯ ಸಹಕಾರಿ ಮಹಾಮಂಡಳ, ಆದಾಯ ತೆರಿಗೆಯ ಅಧಿಕಾರಿಗಳಿಗೂ ಮತ್ತು ಇತರೆ ಕಛೇರಿಗಳ ಅಧಿಕಾರಿ ವರ್ಗದವರಿಗೂ ಬ್ಯಾಂಕು ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಬ್ಯಾಂಕಿನ ಠೇವಣಿದಾರರಿಗೂ, ಸದಸ್ಯರಿಗೂ, ಗ್ರಾಹಕರಿಗೂ, ಸಂಘ-ಸಂಸ್ಥೆಗಳ ಪದಾಧಿಕಾರಿಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಬ್ಯಾಂಕಿನಲ್ಲಿ ಉತ್ತಮ ಸೇವೆಯನ್ನು ಸಲ್ಲಿಸುತ್ತಿರುವ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ನಿರ್ದೇಶಕ ಮಂಡಲಿಯ ಪರವಾಗಿ,
**ಡಾ. ಶಾಮನೂರು ಶಿವಶಂಕರಪ್ಪ**
ಅಧ್ಯಕ್ಷರು
ಬಾಪೂಜಿ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ
ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು

# ಬಾಪೂಜಿ ಕೋ–ಆಪರೇಟಿವ್

## ದಿನಾಂಕ 31–03–2018 ರ

| 31–03–2017ರಲ್ಲಿ ಇದ್ದಂತೆ ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31–03–2018ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 10,30,74,800-00 | **ಷೇರು ಬಂಡವಾಳ** | | 10,88,33,900-00 |
| 10,30,74,800-00 | ಪಾವತಿಯಾದ ಷೇರು ಬಂಡವಾಳ | 10,88,33,900-00 | |
| 10,30,74,800-00 | ವ್ಯಕ್ತಿ ಮತ್ತು ಸಂಸ್ಥೆಗಳಿಂದ | 10,88,33,900-00 | |
| 91,04,93,285-96 | **ಆಪದ್ಧನ ಮತ್ತು ಇತರೆ ನಿಧಿಗಳು** | | 94,41,82,876-97 |
| 42,50,00,032-87 | ಮೀಸಲು ನಿಧಿ (ಆಪದ್ಧನ ನಿಧಿ) | 44,88,30,369-88 | |
| 5,42,81,656-70 | ಕಟ್ಟಡದ ನಿಧಿ | 5,47,81,656-70 | |
| 1,66,45,491-55 | ಲಾಭಾಂಶ ಸಮೀಕರಣ ನಿಧಿ | 1,66,45,491-55 | |
| 1,31,08,329-79 | ಸಾರ್ವಜನಿಕ ಒಳಿತು ನಿಧಿ | 1,34,28,329-79 | |
| 7,77,643-78 | ಸಿಬ್ಬಂದಿ ಗ್ರಾಚ್ಯುಟಿ ನಿಧಿ | - | |
| 28,75,49,176-00 | ಕರಡು ಸಾಲಗಳ ನಿಧಿ | 29,25,87,055-00 | |
| 77,43,015-27 | ಪ್ರಮಾಣಿತ ಆಸ್ತಿಗಳ ಮೇಲೆ ಕಾಯ್ದಿರಿಸುವಿಕೆ | 77,43,015-27 | |
| 2,51,76,726-00 | ಸಿಬ್ಬಂದಿ ಕ್ಷೇಮ ನಿಧಿ | 2,65,04,369-78 | |
| 3,31,05,200-00 | ಗುಂತಾಯಿಸಿದ ಹಣದ ಸವಕಳಿ ನಿಧಿ | 3,41,05,200-00 | |
| 3,43,32,000-00 | ಗುಂತಾಯಿಸಿದ ಹಣದ ಏರಿಳಿತ ನಿಧಿ | 3,48,32,000-00 | |
| 1,17,74,014-00 | ಕರಡು ಸಾಲಗಳ ವಿಶೇಷ ನಿಧಿ | 1,27,25,389-00 | |
| 10,00,000-00 | ಸುವರ್ಣ ಮಹೋತ್ಸವ ನಿಧಿ | 20,00,000-00 | |
| 509,97,45,804-51 | **ಠೇವಣಿಗಳು ಮತ್ತು ಇತರೆ ಖಾತೆಗಳು** | | 524,67,41,408-31 |
| 334,66,09,484-62 | ಮುದ್ದತಿ ಠೇವಣಿಗಳು | 346,28,94,436-72 | |
| 334,25,86,423-62 | ವ್ಯಕ್ತಿಗಳಿಂದ | 346,00,34,436-72 | |
| 40,23,061-00 | ಸೊಸೈಟಿಗಳಿಂದ | 28,60,000-00 | |
| **611,33,13,890-47** | ಮುಂದುವರೆದಿದೆ | | **629,97,58,185-28** |

# ಬ್ಯಾಂಕ್ ಲಿ., ದಾವಣಗೆರೆ

## ಅಢಾವೆ ಪತ್ರಿಕೆ

| 31-03-2017ರಲ್ಲಿ ಇದ್ದಂತೆ ರೂ. ಪೈ. | ಸ್ವತ್ತು ಮತ್ತು ಆಸ್ತಿಗಳು | | 31-03-2018ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 115,65,56,930-20 | **ನಗದು ಶಿಲ್ಕು** | | 111,86,70,955-53 |
| 5,60,61,801-12 | ಕೈಯಲ್ಲಿ ಶಿಲ್ಕು | 6,77,73,227-45 | |
| 1,87,33,701-08 | ರಿಸರ್ವ್ ಬ್ಯಾಂಕ್/ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ/ ರಾಜ್ಯ ಮತ್ತು ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಲ್ಲಿ | 4,81,67,728-08 | |
| 108,17,61,428-00 | ಖಾಯಂ ಠೇವಣಿಗಳಲ್ಲಿ | 100,27,30,000-00 | |
| 127,23,01,499-42 | **ಶಿಲ್ಕು ಇತರೆ ಬ್ಯಾಂಕ್‌ಗಳಲ್ಲಿ** | | 126,42,77,323-96 |
| 20,83,01,499-42 | ಚಾಲ್ತಿ ಖಾತೆಗಳಲ್ಲಿ | 25,82,27,323-96 | |
| 97,40,00,000-00 | ಖಾಯಂ ಠೇವಣಿಗಳಲ್ಲಿ | 100,60,50,000-00 | |
| 9,00,00,000-00 | **ಮನಿ ಅಟ್ ಕಾಲ್ ಅಂಡ್ ಶಾರ್ಟ್ ನೋಟೀಸ್** | - | |
| 189,87,47,385-04 | **ಸಂಚಯಗಳು** | | 201,99,41,516-26 |
| 155,76,46,285-04 | ಕೇಂದ್ರ ಮತ್ತು ರಾಜ್ಯ ಸರ್ಕಾರದ ಭದ್ರತೆಗಳಲ್ಲಿ | 167,88,40,416-26 | |
| 155,76,46,285-04 | ಪುಸ್ತಕ ಮೌಲ್ಯ | 167,88,40,416-26 | |
| 154,09,30,000-00 | ಮುಖ ಬೆಲೆ | 166,41,30,000-00 | |
| 156,55,66,285-04 | ಮಾರುಕಟ್ಟೆ ಬೆಲೆ | 165,63,55,416-28 | |
| 34,10,00,000-00 | ಮತ್ತಿತರೆ ಭದ್ರತೆಗಳಲ್ಲಿ | 34,10,00,000-00 | |
| 1,01,100-00 | ಸಹಕಾರಿ ಸಂಘಗಳ ಷೇರುಗಳಲ್ಲಿ | 1,01,100-00 | |
| **432.76,05,814-66** | ಮುಂದುವರೆದಿದೆ | | **440,28,89,795-75** |

# ಬಾಪೂಜಿ ಕೋ–ಆಪರೇಟಿವ್

## ದಿನಾಂಕ 31–03–2018 ರ

| 31–03–2017ರಲ್ಲಿ ಇದ್ದಂತೆ ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31–03–2018ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 611,33,13,890-47 | **ಹಿಂದಿನಿಂದ ಬಂದದ್ದು** | | 629,97,58,185-28 |
| 147,31,26,827-34 | **ಉಳಿತಾಯ ಠೇವಣಿಗಳು** | 154,44,28,599-33 | |
| 147,12,55,946-66 | ವ್ಯಕ್ತಿಗಳಿಂದ | 154,29,00,015-34 | |
| 18,70,880-68 | ಸೊಸೈಟಿಗಳಿಂದ | 15,28,583-99 | |
| 28,00,09,492-55 | **ಚಾಲ್ತಿ ಠೇವಣಿಗಳು** | 23,94,18,372-26 | |
| 26,94,31,390-51 | ವ್ಯಕ್ತಿಗಳಿಂದ | 22,63,79,437-57 | |
| 1,05,78,102-04 | ಸೊಸೈಟಿಗಳಿಂದ | 1,30,38,934-69 | |
| | **ಸಾಲಗಳು** | | |
| | **ರಿಸರ್ವ್ ಬ್ಯಾಂಕ್, ರಾಜ್ಯ ಮತ್ತು ಜಿಲ್ಲಾ ಕೇಂದ್ರೀಯ ಸಹಕಾರಿ ಬ್ಯಾಂಕ್‌ಗಳಿಂದ** | | |
| 2,26,817-00 | ವಸೂಲಾಗತಕ್ಕ ಮತ್ತು ವಸೂಲಿಗೆ ಬಂದ ಬಿಲ್ಲುಗಳು (ಎದುರು ತೋರಿಸಿದಂತೆ) | | 3,63,892-00 |
| 33,39,696-00 | ಕೊಡಬೇಕಾಗಿರುವ ಬಡ್ಡಿ (ಠೇವಣಿಗಳ ಮೇಲೆ) | | 23,63,751-00 |
| 13,86,80,170-10 | ಕಟ್ ಬಾಕಿ ಬಡ್ಡಿ ಮೀಸಲು ಸಾಲಗಳ ಮೇಲೆ (ಎದುರು ತೋರಿಸಿದಂತೆ) | | 15,06,05,733-11 |
| 2,44,27,926-71 | **ಇತರೆ ಹೊಣೆಗಾರಿಕೆಗಳು** | | 2,90,39,545-85 |
| 14,78,168-00 | ಲಾಭಾಂಶ ಕೊಡಬೇಕಾಗಿರುವುದು | 21,40,810-00 | |
| 12,13,846-50 | ಕೊಡಬೇಕಾದ ಡಿಮ್ಯಾಂಡ್ ಡ್ರಾಫ್ಟ್‌ಗಳು | 10,26,143-00 | |
| 64,68,165-21 | ಕೊಡಬೇಕಾದ ಪೇ ಆರ್ಡರ್‌ಗಳು | 77,61,868-85 | |
| 1,05,26,029-00 | ಅಮಾನತ್ ಖಾತೆ | 1,33,09,757-00 | |
| 5,35,818-00 | ಸಂಡ್ರಿ ಬಾಬ್ತುಗಳು | 5,13,167-00 | |
| 42,05,900-00 | ಲಾಕರ್ ಠೇವಣಿಗಳು | 42,87,800-00 | |
| **627,99,88,500-28** | ಮುಂದುವರೆದಿದೆ | | **648,21,31,107-24** |

# ಬ್ಯಾಂಕ್ ಲಿ., ದಾವಣಗೆರೆ

## ಅಢಾವೆ ಪತ್ರಿಕೆ

| 31–03–2017ರಲ್ಲಿ ಇದ್ದಂತೆ ರೂ. ಪೈ. | ಸ್ವತ್ತು ಮತ್ತು ಆಸ್ತಿಗಳು | | 31–03–2018ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 432,76,05,814-66 | **ಹಿಂದಿನಿಂದ ಬಂದದ್ದು** | | 440,28,89,795-75 |
| 177,21,95,767-79 | **ಸಾಲಗಳು** | | 189,73,10,003-61 |
| 96,39,51,886-79 | ಅಲ್ಪಾವಧಿ ಸಾಲಗಳು | 103,83,55,696-32 | |
| | ಕ್ಯಾಶ್ ಕ್ರೆಡಿಟ್, ಓವರ್ ಡ್ರಾಫ್ಟ್, ಬಿಲ್ಸ್ ಡಿಸ್ಕೌಂಟ್ | 103,82,48,908-52 | |
| 96,38,45,098-99 | ವಾಸ್ತವಿಕ ಭದ್ರತೆಗಳ ಮೇಲೆ | | |
| 93,39,51,886-79 | ವ್ಯಕ್ತಿಗಳಿಂದ ಬರಬೇಕಾದ ಮೊಬಲಗು | 103,83,55,696-32 | |
| 1,36,28,062-06 | ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ಬಾಕಿ | 6,93,64,069-80 | |
| 45,155-80 | ವಸೂಲಾಗದ ಮತ್ತು ವಸೂಲಾತಿಗೆ ಅನುಮಾನಾಸ್ಪದವೆಂದು ಪರಿಗಣಿಸಿದ್ದು | 45,155-80 | |
| 34,88,32,185-00 | **ಮಧ್ಯಮಾವಧಿ ಸಾಲಗಳು** | 41,45,04,793-29 | |
| 21,56,16,926-00 | ವಾಸ್ತವಿಕ ಭದ್ರತೆಗಳ ಮೇಲೆ | 25,75,33,230-00 | |
| 34,88,32,185-00 | ವ್ಯಕ್ತಿಗಳಿಂದ ಬರಬೇಕಾದ ಮೊಬಲಗು | 41,45,04,793-29 | |
| 3,53,77,768-00 | ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ಬಾಕಿ | 3,44,95,178-42 | |
| | ವಸೂಲಾಗದ ಮತ್ತು ವಸೂಲಾತಿಗೆ ಅನುಮಾನಾಸ್ಪದವೆಂದು ಪರಿಗಣಿಸಿದ್ದು | | |
| 45,94,11,696-00 | **ದೀರ್ಘಾವಧಿ ಸಾಲಗಳು** | 44,44,49,514-00 | |
| 45,94,11,696-00 | ವಾಸ್ತವಿಕ ಭದ್ರತೆಗಳ ಮೇಲೆ | 44,44,49,514-00 | |
| 45,94,11,696-00 | ವ್ಯಕ್ತಿಗಳಿಂದ ಬರಬೇಕಾದ ಮೊಬಲಗು | 44,44,49,514-00 | |
| 3,86,97,238-00 | ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ಬಾಕಿ | 4,56,77,080-00 | |
| | ವಸೂಲಾಗದ ಮತ್ತು ವಸೂಲಾತಿಗೆ ಅನುಮಾನಾಸ್ಪದವೆಂದು ಪರಿಗಣಿಸಿದ್ದು | | |
| 2,26,817-00 | **ವಸೂಲಾಗತಕ್ಕ ಮತ್ತು ವಸೂಲಾತಿಗೆ ಕಳುಹಿಸಿರುವ ಬಿಲ್ಲುಗಳು (ಎದುರು ತೋರಿಸಿದಂತೆ)** | | 3,63,892-00 |
| **610,00,28,399-45** | ಮುಂದುವರೆದಿದೆ | | **630,05,63,691-36** |

# ಬಾಪೂಜಿ ಕೋ–ಆಪರೇಟಿವ್

## ದಿನಾಂಕ 31–03–2018 ರ

| 31–03–2017ರಲ್ಲಿ ಇದ್ದಂತೆ ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31–03–2018ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 627,99,88,500-28 | **ಹಿಂದಿನಿಂದ ಬಂದದ್ದು** | | 648,21,31,107-24 |
| 4,52,83,362-01 | **ಲಾಭ ಮತ್ತು ನಷ್ಟ ಖಾತೆ** | | 3,92,94,024-57 |
| | ಕಳೆದ ವರ್ಷದ ಲಾಭ | 4,52,83,362-01 | |
| | ವಿನಿಯೋಗಿಸಿದ್ದು | 4,52,83,362-01 | |
| | ಈ ಸಾಲಿನಲ್ಲಿ ನಿವ್ವಳ ಲಾಭ | 3,92,94,024-57 | |
| | (ಲಾಭ–ನಷ್ಟ ಖಾತೆಯಿಂದ) | | |
| 9,72,005-00 | **ಘಟನಾಪೇಕ್ಷ ಭಾದ್ಯತೆಗಳು** | 17,56,161-00 | |
| | **ಬ್ಯಾಂಕ್ ಗ್ಯಾರಂಟಿಗಳನ್ನು ನೀಡಿರುವುದು** | | |
| 57,75,343-93 | ಆರ್.ಬಿ.ಐ.ನ ಡೆಫ್ ಖಾತೆಯಲ್ಲಿ ಕಾಂಟ್ರಾ | 70,90,923-55 | |
| **632,52,71,862-29** | ಜುಮ್ಲಾ | | **652,14,25,131-81** |

BAPUJI CO-OPERATIVE BANK LIMITED BCB LTD DAVANGERE

# ಬ್ಯಾಂಕ್ ಲಿ., ದಾವಣಗೆರೆ

## ಅಢಾವೆ ಪತ್ರಿಕೆ

| 31–03–2017ರಲ್ಲಿ ಇದ್ದಂತೆ ರೂ. ಪೈ. | ಸ್ವತ್ತು ಮತ್ತು ಆಸ್ತಿಗಳು | | 31–03–2018ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 610,00,28,399-45 | **ಹಿಂದಿನಿಂದ ಬಂದದ್ದು** | | 630,05,63,691-36 |
| 17,66,66,608-83 | **ಬರಬೇಕಾಗಿರುವ ಬಡ್ಡಿ** | | 18,11,18,377-84 |
| 3,79,86,438-73 | (1) ಸಂಚಯಗಳ ಮೇಲೆ | 3,05,12,644-73 | |
| 13,86,80,170-10 | (2) ಕಟ್ ಬಾಕಿ ಸಾಲಗಳ ಮೇಲಿನ ಬಡ್ಡಿ (ಎದುರು ತೋರಿಸಿದಂತೆ) | 15,06,05,733-11 | |
| 55,97,643-20 | **ಪೀಠೋಪಕರಣಗಳು** | | 53,03,026-90 |
| 1,64,60,617-55 | **ಸ್ಥಿರ ಆಸ್ತಿಗಳು** | | 1,56,37,587-45 |
| 2,65,18,593-26 | **ಇತರೆ ಆಸ್ತಿಗಳು** | | 1,88,02,448-26 |
| 39,72,178-16 | (1) ಗಣಕ ಯಂತ್ರಗಳು | 15,71,390-16 | |
| 19,79,791-10 | (2) ಮುಂಗಡಗಳು | 27,40,175-10 | |
| 1,71,500-00 | (3) ಹಬ್ಬದ ಮುಂಗಡಗಳು | 1,34,000-00 | |
| 4,42,248-00 | (4) ವಾಹನ | 3,31,686-00 | |
| 1,88,66,797-00 | (5) ಆದಾಯ ತೆರಿಗೆ ಮುಂಗಡ | 1,26,37,287-00 | |
| 1,35,438-00 | (6) ಕಂಪ್ಯೂಟರ್ ಸಾಫ್ಟ್‌ವೇರ್ | 6,00,072-00 | |
| 1,49,434-00 | (7) ಇ–ಸ್ಟಾಂಪಿಂಗ್ | 54,031-00 | |
| 8,01,207-00 | (8) ಎ.ಟಿ.ಎಂ. ಕಾರ್ಡ್ ಅಕೌಂಟ್ | 7,30,307-00 | |
| | (9) ಶಾಖೆಗಳ ಹೊಂದಾಣಿಕೆ | 3,500-00 | |
| **632,52,71,862-29** | ಜುಮ್ಲಾ | | **652,14,25,131-81** |

## ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ ಮೇಲ್ಕಂಡ ಆಸ್ತಿ–ಜವಾಬ್ದಾರಿ ತಃಖ್ತೆಗಳಿಗೆ ಸಂಬಂಧಿಸಿದಂತೆ ಪ್ರಮುಖ ಅಂಶಗಳ ಬಗ್ಗೆ ಟಿಪ್ಪಣಿಗಳು :

i & ii) ದಿನಾಂಕ 31–03–2018ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital to Risk Asset Ratio) ಪ್ರಮಾಣವು ಶೇಕಡಾ 31.87ರಷ್ಟು ಇರುವುದು. ಈ ಪ್ರಮಾಣವು ಕಳೆದ ಸಾಲಿನ ವರ್ಷಾಂತ್ಯಕ್ಕೆ ಶೇಕಡಾ 31.43 ರಷ್ಟು ಇದ್ದು ಈ ಸಾಲಿನಲ್ಲಿ ಶೇಕಡಾ 0.44ರಷ್ಟು ಹೆಚ್ಚಿಗೆಯಾಗಿರುತ್ತದೆ.

iii) **ಹೂಡಿಕೆಗಳು :**

ಅ) ಪುಸ್ತಕ ಬೆಲೆ ಮತ್ತು ಮುಖ ಬೆಲೆಗಳನ್ನು<br>
ಆ) ಮಾರುಕಟ್ಟೆಯ ಬೆಲೆಗಳನ್ನು } ಅಢಾವೆ ಪತ್ರಿಕೆಯಲ್ಲಿ ನಮೂದಿಸಿದೆ.

ಇ) Details of Issuer composition of Non-SLR Investments and non-performing Non-SLR Investments.

| No. | Issuer | Amount | Extent of 'below investment grade Securities | Extent 'Unrated Securities' | Extent of 'Unlisted Securities' |
|---|---|---|---|---|---|
| (1) | (2) | (3) | (4) | (5) | (6) |
| 1 | PSUs | | | | |
| 2 | Fis | | | | |
| 3 | Public Sector Banks | | | | |
| 4 | Mutual Funds | 3410.00 | | 3410.00 | |
| 5 | Others | 1.01 | | 1.01 | |
| 6 | Provision Held towards Depreciation | 341.05 | | | |

iv) ರಿಯಲ್ ಎಸ್ಟೇಟ್ ಮತ್ತು ಕನ್‌ಸ್ಟ್ರಕ್ಷನ್, ಹೌಸಿಂಗ್ ಸಾಲ ರೂ. 3173.21 ಲಕ್ಷ ಇರುತ್ತದೆ.

v) ಷೇರು ಡಿಬೆಂಚರ್‌ಗಳ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ.

vi) ಅ) ಈ ಸಾಲಿನಲ್ಲಿ ನಿರ್ದೇಶಕ ಮಂಡಲಿಯ ಸದಸ್ಯರಿಂದ ಮತ್ತು ಅವರ ಹತ್ತಿರದ ಸಂಬಂಧಿಗಳಿಂದ ಭದ್ರತಾ ಆಧಾರಗಳ ಮೇಲೆ ದಿನಾಂಕ 31–03–2018ಕ್ಕೆ ಯಾವ ಸಾಲವೂ ಇರುವುದಿಲ್ಲ.

ಆ) ಈ ಸಾಲಿನಲ್ಲಿ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿರುವುದಿಲ್ಲ.

vii) 2017–18ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಸರಾಸರಿ ಬಡ್ಡಿಯ ವೆಚ್ಚವು (Cost of Deposit) ಶೇಕಡಾ 6.65 ರಷ್ಟು ಇದೆ.

viii & ix) ಬ್ಯಾಂಕಿನ ಪ್ರಸಕ್ತ ಸಾಲಿನ ಅನುತ್ಪಾದಕ ಆಸ್ತಿಗಳು ಹಿಂದಿನ ಸಾಲಿನ ಅನುತ್ಪಾದಕ ಆಸ್ತಿಗಳೊಂದಿಗೆ ತುಲನೆ ಮಾಡಿದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ದಿನಾಂಕ | ಒಟ್ಟು ಅನುತ್ಪಾದಕ ಆಸ್ತಿಗಳು | | ನಿವ್ವಳ ಅನುತ್ಪಾದಕ ಆಸ್ತಿಗಳು | |
|---|---|---|---|---|
| | ಮೊಬಲಗು | ಒಟ್ಟು ಸಾಲಗಳಿಗೆ ಶೇಕಡವಾರು | ಮೊಬಲಗು | ಶೇಕಡವಾರು |
| 31–03–2017 | 1501.32 | 8.47 | 0.00 | 0.00 |
| 31–03–2018 | 1713.06 | 9.03 | 0.00 | 0.00 |
| ವ್ಯತ್ಯಾಸ | **211.74** | **0.56** | -- | -- |

**ಎಸ್. ಕಲ್ಲಪ್ಪ** — ಪ್ರಧಾನ ವ್ಯವಸ್ಥಾಪಕರು

**ಡಾ|| ಪಿ. ಶಶಿಕಲಾ** — ನಿರ್ದೇಶಕರು

**ಎ. ಎಸ್. ವೀರಣ್ಣ** — ನಿರ್ದೇಶಕರು

**"ಲೆಕ್ಕ ಪರಿಶೋಧಕರ**

ನಾವು ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ ಇದರ ಕೇಂದ್ರ ಕಛೇರಿ ಮತ್ತು ಎಂಟು ಶಾಖೆಗಳ ಒದಗಿಸಿದ ವಿವರಗಳು ಹಾಗೂ ಸ್ಪಷ್ಟೀಕರಣಗಳ ಮೇರೆಗೆ ನಮ್ಮ ತಿಳುವಳಿಕೆ ಹಾಗೂ ನಂಬಿಕೆ ಮೇರೆಗೆ ಇದರ ಜೊತೆ ಲಗತ್ತಿಸಿರುವ ಆಸ್ತಿ ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತದೆಂದು ದೃಢೀಕರಿಸುತ್ತೇನೆ.

ಸ್ಥಳ : ದಾವಣಗೆರೆ

ದಿನಾಂಕ : 25–07–2018

x) 2017-2018ನೇ ಸಾಲಿನಲ್ಲಿ ಬ್ಯಾಂಕಿನ ಲಾಭಗಳಿಕೆ ಈ ಕೆಳಕಂಡಂತಿರುತ್ತದೆ.

* ಬ್ಯಾಂಕಿನ ಬಡ್ಡಿಯ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 7.90 ಇರುತ್ತದೆ.
* ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ 0.09 ಇರುತ್ತದೆ.
* ಬ್ಯಾಂಕಿನ ಲಾಭವು ದುಡಿಯುವ ಬಂಡವಾಳದ ಮೇಲೆ ಶೇಕಡಾ 1.04 ಇರುತ್ತದೆ.
* ಬ್ಯಾಂಕಿನ ಆಸ್ತಿಗಳ ಮೇಲೆ ಬಂದ ಗಳಿಕೆಯ ಪ್ರಮಾಣವು ಶೇಕಡಾ 0.62 ಇರುತ್ತದೆ.
* ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ ರೂ. 610.60 ಲಕ್ಷ ಇರುತ್ತದೆ.
* ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ. 3.36 ಲಕ್ಷ ಇರುತ್ತದೆ.

xi & xii) ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ನಿಧಿಗಳ ಮೊಬಲಗುಗಳನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತಿರುತ್ತದೆ.

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಗುಂತಾಯಗಳ ಸವಕಳಿ ನಿಧಿ | ಪ್ರಮಾಣಿಕ ಆಸ್ತಿಗಳ ಮೇಲೆ ಕಾಯ್ದಿರಿಸುವಿಕೆ |
|---|---|---|---|
| 31-03-2017 | 2875.49 | 331.05 | 77.43 |
| 31-03-2018 | 2925.87 | 341.05 | 77.43 |
| ವ್ಯತ್ಯಾಸ | **50.38** | **10.00** | – |

xiii) ವಿದೇಶಿ ವಿನಿಮಯದ ಆಸ್ತಿ ಮತ್ತು ಜವಾಬ್ದಾರಿಗಳು : ಅನ್ವಯಿಸುವುದಿಲ್ಲ.

xiv) ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಂನ್ನು ದಿನಾಂಕ 26-05-2017 ಮತ್ತು 28-11-2017 ರಂದು ಒಟ್ಟು ರೂ. 60,90,780-98 ಪೈಸೆ ಡಿಪಾಜಿಟ್ ಇನ್ಸೂರನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.

xv) ರಿಸರ್ವ್ ಬ್ಯಾಂಕಿನ ಯಾವುದೇ ದಂಡನಾರ್ಹನೆಗೆ ಗುರಿಯಾಗಿರುವುದಿಲ್ಲ.

xvi) ಪುನರ್ರಚಿಸಲಾದ ಸಾಲದ ಖಾತೆಗಳು ಇರುವುದಿಲ್ಲ.

xvii) ಸ್ಥಿರಾಸ್ತಿಗಳ ಮೌಲ್ಯಾಂಕನ / ಪುನರ್ ಮೌಲ್ಯಾಂಕನ : ಇರುವುದಿಲ್ಲ

xviii)

| **ಡೆಫ್ ಖಾತೆ** | ಹಿಂದಿನ ವರ್ಷ | ಪ್ರಸಕ್ತ ವರ್ಷ |
|---|---|---|
| ವರ್ಗಾವಣೆ ಮಾಡಿದ ಪ್ರಾರಂಭಿಕ ಮೊತ್ತ | 52,44,805-96 | 57,75,343-93 |
| + ಪ್ರಸಕ್ತ ವರ್ಷದಲ್ಲಿ ವರ್ಗಾವಣೆ ಮಾಡಿದ ಮೊತ್ತ | 5,30,537-97 | 13,15,579-62 |
| ಕೋರಿಕೆ ಮೇರೆಗೆ ವಾಪಾಸ್ಸು ಜಮಾ ಮಾಡಿದ ಮೊತ್ತ | – | – |
| ವರ್ಗಾಯಿಸಿದ ಅಂತಿಮ ಮೊತ್ತ | **57,75,343-93** | **70,90,923-55** |

**ಎಸ್. ಎಸ್. ಮಲ್ಲಿಕಾರ್ಜುನ್,** ಉಪಾಧ್ಯಕ್ಷರು
ಮಾಜಿ ಸಚಿವರು

**ಡಾ. ಶಾಮನೂರು ಶಿವಶಂಕರಪ್ಪ,** ಅಧ್ಯಕ್ಷರು
ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು

<u>ಪ್ರಮಾಣ ಪತ್ರ''</u>

(ಕ್ರೊಢೀಕೃತ) 2017-18ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. ಇದಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರದ ಪುಸ್ತಕಗಳು ಮತ್ತು ಜವಾಬ್ದಾರಿ ತಃಖ್ತೆ ಮತ್ತು ಲಾಭ ನಷ್ಟ ತಃಖ್ತೆಯು ದಿನಾಂಕ 31-03-2018ಕ್ಕೆ ಇದ್ದಂತೆ ನಮ್ಮ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು

ಚಾರ್ಟರ್ಡ್ ಅಕೌಂಟೆಂಟ್
**(ಶ್ರೀ ವಿ. ಲಿಂಗರಾಜು)** ಪ್ರೊಪ್ರೈಟರ್

# ಬಾಪೂಜಿ ಕೋ–ಆಪರೇಟಿವ್

## ದಿನಾಂಕ 31–03–2018ರ

| 31–03–2017ರಲ್ಲಿ ಇದ್ದಂತೆ ರೂ. ಪೈ. | ಖರ್ಚು | | 31–03–2018ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 35,24,65,958-00 | ಠೇವಣಿಗಳು ಮತ್ತು ಸಾಲಗಳ ಮೇಲೆ ಕೊಟ್ಟ ಬಡ್ಡಿ | 61,17,45,,056-00 | 34,06,33,183-00 |
| | ಶಾಖೆಗಳ ಠೇವಣಿ ಮತ್ತು ಸಾಲಗಳ ಮೇಲಿನ ಬಡ್ಡಿ ಕಳೆದು (ಕಾಂಟ್ರಾ) | 27,11,11,873-00 | |
| 6,76,57,680-38 | ಸಂಬಳ, ಭತ್ಯೆ, ಭವಿಷ್ಯ ನಿಧಿ ಮತ್ತು ಸಿಬ್ಬಂದಿ ಗ್ರಾಚ್ಯುಟಿ | | 6,58,68,700-44 |
| 2,70,000-00 | ಆಡಳಿತ ಮಂಡಲಿ ಸದಸ್ಯರುಗಳ ಮತ್ತು ಸ್ಥಳೀಯ ಸಮಿತಿಗಳ ಸದಸ್ಯರ ಫೀ ಮತ್ತು ಭತ್ಯೆಗಳು | | 3,25,500-00 |
| 79,19,445-55 | ಬಾಡಿಗೆ, ತೆರಿಗೆಗಳು, ವಿಮೆ ಮತ್ತು ವಿದ್ಯುಚ್ಛಕ್ತಿ ಖರ್ಚುಗಳು | | 86,62,079-98 |
| 83,96,106-00 | ಬೋನಸ್ ಮತ್ತು ಎಕ್ಸ್‌ಗ್ರೇಷಿಯ ಸಿಬ್ಬಂದಿಗೆ | | 84,35,498-00 |
| 3,92,712-00 | ಅಂಚೆ ಮತ್ತು ತಂತಿ ದೂರವಾಣಿ ಖರ್ಚು | | 5,05,609-00 |
| 2,91,975-00 | ಕಾನೂನು ಖರ್ಚುಗಳು | | 2,45,591-00 |
| 16,22,202-00 | ಲೆಕ್ಕ ಪರಿಶೋಧಕರ ಮತ್ತು ಮಾರಾಟಾಧಿಕಾರಿಗಳ ವೆಚ್ಚ | | 17,65,657-00 |
| 80,74,951-29 | ಆಸ್ತಿಗಳ ಮೇಲಿನ ಸವಕಳಿ ಮತ್ತು ದುರಸ್ತಿ ಖರ್ಚು | | 99,53,363-33 |
| 14,18,261-45 | ಮುದ್ರಣ ಮತ್ತು ಲೇಖನ ಸಾಮಾಗ್ರಿಗಳು ಮತ್ತು ಪ್ರಚಾರ | | 10,94,425-89 |
| 20,00,000-00 | ಕರಡು ಸಾಲಗಳ ನಿಧಿಗೆ | | 50,37,879-00 |
| 5,00,000-00 | ಕರಡು ಸಾಲಗಳ ವಿಶೇಷ ನಿಧಿಗೆ | | 9,51,375-00 |
| 2,36,24,851-00 | ಆದಾಯ ತೆರಿಗೆಯ ಬಾಬ್ತು | | 2,11,99,715-00 |
| 47,86,895-00 | ಇತರೆ ಖರ್ಚುಗಳು | | 51,33,482-00 |
| 4,52,83,362-01 | ನಿವ್ವಳ ಲಾಭ | | 3,92,94,024-57 |
| **52,47,04,399-68** | **ಜುಮ್ಲಾ** | | **50,91,06,083-21** |

**ಎಸ್. ಕಲ್ಲಪ್ಪ**
ಪ್ರಧಾನ ವ್ಯವಸ್ಥಾಪಕರು

**ಡಾ॥ ಪಿ. ಶಶಿಕಲಾ**
ನಿರ್ದೇಶಕರು

**ಎ. ಎಸ್. ವೀರಣ್ಣ**
ನಿರ್ದೇಶಕರು

ಸ್ಥಳ : ದಾವಣಗೆರೆ

ದಿನಾಂಕ : 25–07–2018

# ಬ್ಯಾಂಕ್ ಲಿ., ದಾವಣಗೆರೆ

## ಲಾಭ–ನಷ್ಟ ಪತ್ರಿಕೆ

| 31–03–2017ರಲ್ಲಿ ಇದ್ದಂತೆ ರೂ. ಪೈ. | ಆದಾಯ | | 31–03–2018ರಲ್ಲಿ ಇದ್ದಂತೆ ರೂ. ಪೈ. |
|---|---|---|---|
| 19,32,71,242-20 | ಬಡ್ಡಿ ಮತ್ತು ಸೋಡಿ | 46,34,46,880-99 | 19,23,35,007-99 |
| | ಶಾಖೆಗಳ ಠೇವಣಿ ಮತ್ತು ಸಾಲಗಳ ಮೇಲಿನ ಬಡ್ಡಿ ಕಳೆದು (ಕಾಂಟ್ರಾ) | 27,11,11,873-00 | |
| 15,17,277-74 | ದಲ್ಲಾಳಿ, ವಿನಿಮಯ ಮತ್ತು ರುಸುಂ (ವಿನಾಯಿತಿ ಮತ್ತು ಧರ್ಮದಿಂದ / ಬ್ಯಾಂಕೇತರ ಆಸ್ತಿ ಮಾರಾಟದಿಂದ ಬಂದ ಆದಾಯ) | | 18,32,610-98 |
| 32,99,15,879-74 | ಇತರೆ ಜಮಾಗಳು | | 31,49,38,464-24 |
| 32,13,72,005-25 | ಸಂಚಯ ಮೇಲಿನ ಆದಾಯ | 31,12,27,728-27 | |
| 10,07,624-49 | ಇತರೆ ಜಮಾಗಳು | 11,27,985-97 | |
| 13,12,250-00 | ಲಾಕರ್ ಬಾಡಿಗೆ | 13,62,750-00 | |
| 62,24,000-00 | ಸೆಕ್ಯೂರಿಟಿಗಳ ಮಾರಾಟದಿಂದ ಬಂದ ಲಾಭ | 12,20,000-00 | |
| 52,47,04,399-68 | ಜುಮ್ಲಾ | | 50,91,06,083-21 |

**ಎಸ್. ಎಸ್. ಮಲ್ಲಿಕಾರ್ಜುನ್,** ಉಪಾಧ್ಯಕ್ಷರು
ಮಾಜಿ ಸಚಿವರು

**ಡಾ. ಶಾಮನೂರು ಶಿವಶಂಕರಪ್ಪ,** ಅಧ್ಯಕ್ಷರು
ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು

" ಪರಿಶೀಲಿಸಿದೆ "
**ಶ್ರೀ ವಿ. ಲಿಂಗರಾಜು**
ಚಾರ್ಟರ್ಡ್ ಅಕೌಂಟೆಂಟ್ಸ್, ದಾವಣಗೆರೆ
ಮೆಂಬರ್‌ಶಿಪ್ ನಂ. 218951

## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ 2017-2018ನೇ ಸಾಲಿಗೆ ಮಂಜೂರಾದ ಆಯ-ವ್ಯಯ 2018-2019ರ ಅಂದಾಜು

| ಕ್ರಮ ಸಂಖ್ಯೆ | ವಿವರಗಳು | 2017-2018ರ ಮಂಜೂರಾದ ಬಡ್ಜೆಟ್ | 2017-2018ಕ್ಕೆ ಖರ್ಚು ಆದದ್ದು | ಹೆಚ್ಚುವರಿಯಾದ ಖರ್ಚು | 2018-2019ರ ಅಂದಾಜು ಖರ್ಚು | 2018-2019ರ ಅಂದಾಜು ಆದಾಯ |
|---|---|---|---|---|---|---|
| 1 | ಠೇವಣಿಗಳ ಮೇಲಿನ ಬಡ್ಡಿ | 35,50,00,000-00 | 34,06,33,183-00 | -- | 34,50,00,000-00 | |
| 2 | ಸಿಬ್ಬಂದಿ ಸಂಬಳ, ಭವಿಷ್ಯ ನಿಧಿ ಮತ್ತು ಗ್ರಾಚ್ಯುಟಿ ಪ್ರೀಮಿಯಂ | 7,50,00,000-00 | 6,58,68,700-44 | -- | 8,00,00,000-00 | |
| 3 | ನಿರ್ದೇಶಕರ ಸಭೆಯ ಭತ್ಯೆ | 3,50,000-00 | 3,25,500-00 | -- | 5,00,000-00 | |
| 4 | ಬಾಡಿಗೆ, ವಿದ್ಯುಚ್ಛಕ್ತಿ, ವಿಮೆ, ಟ್ಯಾಕ್ಸ್ | 1,00,00,000-00 | 83,67,803-98 | -- | 95,00,000-00 | |
| 5 | ಅಂಚೆ ಮತ್ತು ತಂತಿ | 6,00,000-00 | 5,05,609-00 | -- | 6,00,000-00 | |
| 6 | ಮುದ್ರಣ ಮತ್ತು ಕಂಪ್ಯೂಟರ್ ಸ್ಟೇಷನರಿ | 12,00,000-00 | 8,31,164-89 | -- | 12,00,000-00 | |
| 7 | ಪ್ರಚಾರ | 4,00,000-00 | 2,63,261-00 | -- | 4,00,000-00 | |
| 8 | ಚಂದಾ | 3,00,000-00 | 1,41,270-00 | -- | 3,00,000-00 | |
| 9 | ಲೆಕ್ಕ ಪರಿಶೋಧಕರ ಸಂಭಾವನೆ | 15,00,000-00 | 12,25,960-00 | -- | 15,00,000-00 | |
| 10 | ಸೇಲ್ ಆಫೀಸರ್ ವೇತನ | 7,00,000-00 | 5,39,697-00 | -- | 8,00,000-00 | |
| 11 | ಪ್ರವಾಸ ಭತ್ಯೆ | 2,00,000-00 | 79,334-00 | -- | 2,00,000-00 | |
| 12 | ಮಹಾಸಭೆಯ ಖರ್ಚು | 8,00,000-00 | 6,51,725-00 | -- | 8,00,000-00 | |
| 13 | ಸವಕಳಿ, ರಿಪೇರಿ, ನವೀಕರಣ ಮತ್ತು ನಿರ್ವಹಣೆ | 90,00,000-00 | 80,56,244-55 | -- | 95,00,000-00 | |
| 14 | ಸಿಬ್ಬಂದಿ ತರಬೇತಿ ಖರ್ಚು | 2,00,000-00 | 79,000-00 | -- | 2,00,000-00 | |
| 15 | ಕಾನೂನು ಖರ್ಚು | 4,00,000-00 | 2,45,591-00 | -- | 5,00,000-00 | |
| 16 | ಲಕ್ಷ್ಮೀ ಠೇವಣಿ ಸಂಗ್ರಹಕಾರರ ಕಮೀಷನ್ | 15,00,000-00 | 10,54,192-00 | -- | 15,00,000-00 | |
| 17 | ಇತರೆ ಖರ್ಚುಗಳು | 30,00,000-00 | 31,27,961-00 | 1,27,961-00 | 40,00,000-00 | |
| 18 | ಎಕ್ಸ್‌ಗ್ರೇಷಿಯಾ | 95,00,000-00 | 84,35,498-00 | -- | 98,00,000-00 | |
| 19 | ಆದಾಯ ಕರ | 2,50,00,000-00 | 2,11,99,715-00 | -- | 2,50,00,000-00 | |
| 20 | ಜಿ.ಎಸ್.ಟಿ. | 6,00,000-00 | 2,94,276-00 | -- | 10,00,000-00 | |
| 21 | ಕೋರ್ ಬ್ಯಾಂಕಿಂಗ್ ಸಲ್ಯೂಷನ್ಸ್‌ಗೆ | 35,00,000-00 | -- | -- | 25,00,000-00 | |
| 22 | ಸೆಕ್ಯೂರಿಟಿ ಪ್ರೀಮಿಯಂ ಅಮಾರ್ಟೈಸೇಷನ್ | 20,00,000-00 | 18,97,118-78 | | 20,00,000-00 | |
| 23 | ನಿವ್ವಳ ಲಾಭ | 5,37,50,000-00 | 3,92,94,024-57 | | 4,62,00,000-00 | |
| | | ಅಂದಾಜು ಆದಾಯ | ಬಂದದ್ದು | | | |
| 1 | ಸಾಲಗಳ ಮೇಲಿನ ಬಡ್ಡಿ | 21,00,00,000-00 | 19,23,35,007-99 | | | 22,00,00,000-00 |
| 2 | ಗುಂತಾಯಿಸಿದ ಹಣದ ಆದಾಯ | 33,00,00,000-00 | 31,12,27,728-27 | | | 31,25,00,000-00 |
| 3 | ಕಮೀಷನ್ ಮತ್ತು ವಿನಿಮಯ | 15,00,000-00 | 18,46,530-98 | | | 20,00,000-00 |
| 4 | ಇತರೆ | 10,00,000-00 | 11,14,065-97 | | | 15,00,000-00 |
| 5 | ಲಾಕರ್ ಬಾಡಿಗೆ | 20,00,000-00 | 13,62,750-00 | | | 20,00,000-00 |
| 6 | ಸೆಕ್ಯೂರಿಟಿಗಳ ಮಾರಾಟದಿಂದ | 1,00,00,000-00 | 12,20,000-00 | | -- | 50,00,000-00 |
| | ಒಟ್ಟು ರೂ. | 55,45,00,000-00 | 50,91,06,083-21 | | 54,30,00,000-00 | 54,30,00,000-00 |

**ಡಾ. ಶಾಮನೂರು ಶಿವಶಂಕರಪ್ಪ,** ಅಧ್ಯಕ್ಷರು
ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

## ಪ್ರಗತಿಯ ಪಕ್ಷಿನೋಟ

(ರೂ. ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 1970 | 1980 | 1990 | 1999-2000 | 2010-11 | 2011-12 | 2012-13 | 2013-14 | 2014-15 | 2015-16 | 2016-17 | 2017-18 |
|---|---|---|---|---|---|---|---|---|---|---|---|---|---|
| 1. | ಸದಸ್ಯರು (ಸಂಖ್ಯೆಗಳಲ್ಲಿ) | 92 | 868 | 2543 | 6433 | 9637 | 10184 | 10436 | 10377 | 10479 | 10511 | 10363 | 10420 |
| 2. | ಷೇರು ಬಂಡವಾಳ | 0.69 | 6.62 | 42.10 | 189.00 | 612.29 | 671.77 | 713.92 | 805.24 | 868.80 | 952.40 | 1030.75 | 1088.34 |
| 3. | ಆಪದ್ಧನ ನಿಧಿ ಮತ್ತು ಇತರೆ ನಿಧಿಗಳು | -- | 17.66 | 218.22 | 2622.79 | 6597.14 | 7058.49 | 7326.46 | 7762.91 | 8203.61 | 8655.12 | 9104.93 | 9441.83 |
| 4. | ಠೇವಣಿಗಳು | 14.75 | 191.40 | 2053.04 | 9943.24 | 25304.16 | 29960.51 | 35134.18 | 39392.45 | 42502.29 | 44890.60 | 50997.46 | 52467.41 |
| 5. | ಸಾಲ ಮತ್ತು ಮುಂಗಡಗಳು | 5.98 | 145.71 | 1405.98 | 8696.97 | 11291.01 | 13558.63 | 13866.97 | 13400.46 | 15713.72 | 16629.54 | 17721.96 | 18973.10 |
| 6. | ಇನ್‌ವೆಸ್ಟ್‌ಮೆಂಟ್ಸ್ | -- | -- | -- | -- | 19715.47 | 22468.27 | 27772.31 | 32801.49 | 33974.91 | 35357.55 | 40445.09 | 40287.21 |
| 7. | ದುಡಿಯುವ ಬಂಡವಾಳ | 15.48 | 228.55 | 2480.40 | 13463.82 | 33218.26 | 38206.36 | 43847.64 | 48765.22 | 52504.57 | 55305.58 | 61863.65 | 63704.56 |
| 8. | ನಿವ್ವಳ ಲಾಭ | 0.03 | 8.74 | 84.36 | 520.95 | 506.44 | 300.44 | 449.73 | 482.62 | 500.36 | 553.34 | 452.83 | 392.94 |
| 9. | ಲಾಭಾಂಶ | 6.25% | 12% | 12% | 15% | 15% | 15% | 15% | 15% | 18% | 15% | 18% | 18%* |
| 10. | ಆಡಿಟ್ ವರ್ಗೀಕರಣ | 'ಬಿ' | 'ಎ' | 'ಎ' | 'ಎ' | 'ಎ' | 'ಎ' | 'ಎ' | 'ಎ' | 'ಎ' | 'ಎ' | 'ಎ' | 'ಎ' |
| | | | | | | | | | | | | | *ಉದ್ದೇಶಿತ |

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಕೆ.ಸಿ.ಎಸ್. ಕಾಯ್ದೆ 1960, ದಿನಾಂಕ 29-07-2017ರ ಮೇರೆಗೆ ಬ್ಯಾಂಕಿನ ಉಪನಿಬಂಧನೆಗಳಿಗೆ ಸೂಚಿಸಿರುವ ತಿದ್ದುಪಡಿಗಳು.**

| ಬೈಲಾ ನಂ. | ಹಾಲಿ ಉಪ ನಿಬಂಧನೆಗಳು | ಸೂಚಿಸಿರುವ ತಿದ್ದುಪಡಿ | ತಿದ್ದುಪಡಿಗೆ ಕಾರಣ |
|---|---|---|---|
| **4**<br>(30) | **ಪದಗಳ ಅರ್ಥ ವಿವರಣೆ :**<br>**"ಚುನಾವಣಾಧಿಕಾರಿ"** ಎಂದರೆ, ಸಹಕಾರ ಸಂಘಗಳ ಎಲ್ಲಾ ಚುನಾವಣೆಗಳನ್ನು ನಡೆಸುವುದಕ್ಕೆ ಮತ್ತು ತತ್ಸಂಬಧದ ಮತದಾರರಪಟ್ಟಿ ತಯಾರಿಸುವುದಕ್ಕೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಸಮನ್ವಯಗೊಳಿಸಲು ಮತ್ತು ವಹಿಸಲಾದ ಅಂತಹ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು **ಬ್ಯಾಂಕಿನ ಕಾರ್ಯಕ್ಷೇತ್ರದ ಸಹಕಾರ ಸಂಘಗಳ ಸಹಾಯಕ ನಿಬಂಧಕರು/ ಉಪನಿಬಂಧಕರು/ಜಂಟಿ ನಿಬಂಧಕರನ್ನು ಹೊರತುಪಡಿಸಿ,** ನಿರ್ದಿಷ್ಟ ಅವಧಿಗೆ ಜಿಲ್ಲೆ/ಪ್ರಾಂತ/ರಾಜ್ಯ **ಚುನಾವಣಾಧಿಕಾರಿ** ಎಂದು **ಸಹಕಾರ ಚುನಾವಣಾ ಪ್ರಾಧಿಕಾರ**ದಿಂದ ನೇಮಿಸಲ್ಪಟ್ಟ ಒಬ್ಬ ಅಧಿಕಾರಿ. | **4 ಪದಗಳ ಅರ್ಥ ವಿವರಣೆ :**<br>(30) **"ಚುನಾವಣಾಧಿಕಾರಿ"** ಎಂದರೆ, ಸಹಕಾರ ಸಂಘಗಳ ಎಲ್ಲಾ ಚುನಾವಣೆಗಳನ್ನು ನಡೆಸುವುದಕ್ಕೆ ಮತ್ತು ತತ್ಸಂಬಧದ ಮತದಾರರಪಟ್ಟಿ ತಯಾರಿಸುವುದಕ್ಕೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಸಮನ್ವಯಗೊಳಿಸಲು ಮತ್ತು ವಹಿಸಲಾದ ಅಂತಹ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಬ್ಯಾಂಕಿನ **ಕಾರ್ಯಕ್ಷೇತ್ರದ ನಿಬಂಧಕರನ್ನು** ಹೊರತುಪಡಿಸಿ, ನಿರ್ದಿಷ್ಟ ಅವಧಿಗೆ ಜಿಲ್ಲೆ/ಪ್ರಾಂತ/ರಾಜ್ಯ ಚುನಾವಣಾಧಿಕಾರಿ ಎಂದು ಸಹಕಾರ ಚುನಾವಣಾ ಪ್ರಾಧಿಕಾರದಿಂದ ನೇಮಿಸಲ್ಪಟ್ಟ ಒಬ್ಬ ಅಧಿಕಾರಿ. | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1960, ದಿನಾಂಕ 29-07-2017ರ ಸೂಕ್ತ ತಿದ್ದುಪಡಿ ಮೇರೆಗೆ |
| (31) | **"ರಿಟರ್ನಿಂಗ್ ಅಧಿಕಾರಿ"** ಎಂದರೆ, ಯಾವುದೇ ಸಹಕಾರ ಸಂಘದ ಪ್ರತಿನಿಧಿಗಳ ಚುನಾವಣೆ ಅಥವಾ ನಿರ್ದೇಶಕರ ಸಾಮಾನ್ಯ ಚುನಾವಣೆ ಅಥವಾ ಪದಾಧಿಕಾರಿಗಳ ಚುನಾವಣೆಯನ್ನು ಪ್ರತಿನಿಧಿಯ ಅಥವಾ ನಿರ್ದೇಶಕನ ಅಥವಾ ಪದಾಧಿಕಾರಿಯ ಪದದಲ್ಲಿ ಉಂಟಾಗುವ ಯಾವುದೇ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ನಡೆಸುವ ಚುನಾವಣೆಯನ್ನೂ ಒಳಗೊಂಡಂತೆ ನಡೆಸಲು **ಬ್ಯಾಂಕಿನ ಕಾರ್ಯಕ್ಷೇತ್ರದ ಸಹಕಾರ ಸಂಘಗಳ ಸಹಾಯಕ ನಿಬಂಧಕರು / ಉಪನಿಬಂಧಕರು / ಜಂಟಿ ನಿಬಂಧಕರನ್ನು ಹೊರತುಪಡಿಸಿ, ಸಹಕಾರ ಚುನಾವಣಾ ಪ್ರಾಧಿಕಾರ**ದಿಂದ **ರಿಟರ್ನಿಂಗ್ ಅಧಿಕಾರಿ** ಎಂದು ನೇಮಿಸಲ್ಪಟ್ಟ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಒಬ್ಬ ಅಧಿಕಾರಿ. ಇದು ರಿಟರ್ನಿಂಗ್ ಅಧಿಕಾರಿಯ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ನೇಮಿಸಲ್ಪಟ್ಟ ಒಬ್ಬ **ಸಹಾಯಕ ರಿಟರ್ನಿಂಗ್ ಅಧಿಕಾರಿ**ಯನ್ನು ಒಳಗೊಳ್ಳುತ್ತದೆ. | (31) **"ರಿಟರ್ನಿಂಗ್ ಅಧಿಕಾರಿ"** ಎಂದರೆ, ಯಾವುದೇ ಸಹಕಾರ ಸಂಘದ ಪ್ರತಿನಿಧಿಗಳ ಚುನಾವಣೆ ಅಥವಾ ನಿರ್ದೇಶಕರ ಸಾಮಾನ್ಯ ಚುನಾವಣೆ ಅಥವಾ ಪದಾಧಿಕಾರಿಗಳ ಚುನಾವಣೆಯನ್ನು ಪ್ರತಿನಿಧಿಯ ಅಥವಾ ನಿರ್ದೇಶಕನ ಅಥವಾ ಪದಾಧಿಕಾರಿಯ ಪದದಲ್ಲಿ ಉಂಟಾಗುವ ಯಾವುದೇ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ನಡೆಸುವ ಚುನಾವಣೆಯನ್ನೂ ಒಳಗೊಂಡಂತೆ ನಡೆಸಲು ಬ್ಯಾಂಕಿನ **ಕಾರ್ಯಕ್ಷೇತ್ರದ ನಿಬಂಧಕರನ್ನು** ಹೊರತುಪಡಿಸಿ, ಸಹಕಾರ ಚುನಾವಣಾ ಪ್ರಾಧಿಕಾರದಿಂದ ರಿಟರ್ನಿಂಗ್ ಅಧಿಕಾರಿ ಎಂದು ನೇಮಿಸಲ್ಪಟ್ಟ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಒಬ್ಬ ಅಧಿಕಾರಿ. ಇದು ರಿಟರ್ನಿಂಗ್ ಅಧಿಕಾರಿಯ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ನೇಮಿಸಲ್ಪಟ್ಟ ಒಬ್ಬ ಸಹಾಯಕ ರಿಟರ್ನಿಂಗ್ ಅಧಿಕಾರಿಯನ್ನು ಒಳಗೊಳ್ಳುತ್ತದೆ. | |
| (36) | | (36) **"ಕಾರ್ಯಕ್ಷೇತ್ರದ ನಿಬಂಧಕ" ಎಂದರೆ ಕಾಯ್ದೆಯ ಕಲಂ 2ಎ ನಲ್ಲಿ ತಿಳಿಸಿದ ಸಹಾಯಕ ನಿಬಂಧಕರು / ಉಪನಿಬಂಧಕರು / ಜಂಟಿ ನಿಬಂಧಕರು** | |
| (31) | **ಸದಸ್ಯರ ರಿಜಿಸ್ಟರ್ :**<br>ಮಂಡಲಿಯು ನಿಗದಿಪಡಿಸಿದ ರೀತಿಯಲ್ಲಿ ಬ್ಯಾಂಕು ಪ್ರತಿ ಸಹಕಾರ ವರ್ಷದ ಕೊನೆಯ ದಿನದಂದು ಇರುವಂತೆ ತನ್ನ ಸದಸ್ಯರುಗಳ ಒಂದು ಪಟ್ಟಿಯನ್ನು ಸಿದ್ದಪಡಿಸತಕ್ಕದ್ದು. ಸದಸ್ಯರುಗಳ ಪಟ್ಟಿಯನ್ನು | (31) **ಸದಸ್ಯರ ರಿಜಿಸ್ಟರ್ :**<br>ಮಂಡಲಿಯು ನಿಗದಿಪಡಿಸಿದ ರೀತಿಯಲ್ಲಿ ಬ್ಯಾಂಕು ಪ್ರತಿ ಸಹಕಾರ ವರ್ಷದ ಕೊನೆಯ ದಿನದಂದು ಇರುವಂತೆ ತನ್ನ ಸದಸ್ಯರುಗಳ ಒಂದು ಪಟ್ಟಿಯನ್ನು ಸಿದ್ದಪಡಿಸತಕ್ಕದ್ದು. ಸದಸ್ಯರುಗಳ ಪಟ್ಟಿಯನ್ನು **ಆಕಸ್ಮಿಕ** | |

| | | | |
|---|---|---|---|
| | ಮಂಡಲಿಯ ಚುನಾವಣೆಯ ದಿನಾಂಕಕ್ಕೆ ಹದಿನೈದು ದಿವಸ ಮುಂಚಿತವಾಗಿ ಪರಿಷ್ಕರಿಸತಕ್ಕದ್ದು ಮತ್ತು ಸದರಿ ಪಟ್ಟಿಯನ್ನು ಈ ಹಿಂದೆ ಪರಿಷ್ಕರಿಸಲಾದ ದಿನಾಂಕದಿಂದ ಹಿಡಿದು ಪಟ್ಟಿಯನ್ನು ಪರಿಷ್ಕರಿಸಲಾದ ದಿನಾಂಕದಂದು ಕೊನೆಗೊಳ್ಳುವ ಅವಧಿಯವರೆಗೆ ಹೊಸದಾಗಿ ಸೇರಿಸಲ್ಪಟ್ಟ ಸದಸ್ಯರುಗಳನ್ನು ಸೇರಿಸಿ ಸದರಿ ಅವಧಿಯಲ್ಲಿ ತೆಗೆದುಹಾಕಲಾದ ಸದಸ್ಯರ ಹೆಸರುಗಳನ್ನು ಹೊರತು ಪಡಿಸತಕ್ಕದ್ದು. | **ಖಾಲಿ ಸ್ಥಾನವನ್ನು ಸೇರಿದಂತೆ** ಮಂಡಲಿಯ ಚುನಾವಣೆಯ ದಿನಾಂಕಕ್ಕೆ ಹದಿನೈದು ದಿವಸ ಮುಂಚಿತವಾಗಿ ಪರಿಷ್ಕರಿಸತಕ್ಕದ್ದು ಮತ್ತು ಸದರಿ ಪಟ್ಟಿಯನ್ನು ಈ ಹಿಂದೆ ಪರಿಷ್ಕರಿಸಲಾದ ದಿನಾಂಕದಿಂದ ಹಿಡಿದು ಪಟ್ಟಿಯನ್ನು ಪರಿಷ್ಕರಿಸಲಾದ ದಿನಾಂಕದಂದು ಕೊನೆಗೊಳ್ಳುವ ಅವಧಿಯವರೆಗೆ ಹೊಸದಾಗಿ ಸೇರಿಸಲ್ಪಟ್ಟ ಸದಸ್ಯರುಗಳನ್ನು ಸೇರಿಸಿ ಸದರಿ ಅವಧಿಯಲ್ಲಿ ತೆಗೆದುಹಾಕಲಾದ ಸದಸ್ಯರ ಹೆಸರುಗಳನ್ನು ಹೊರತುಪಡಿಸತಕ್ಕದ್ದು. | |
| (47) | **ಮತ ನೀಡಿಕೆ :**<br>(3) ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ / ಚುನಾವಣೆಯ ದಿನಾಂಕದಿಂದ ಕನಿಷ್ಠ 45 ದಿನಗಳ ಮುಂಚೆ ಬ್ಯಾಂಕಿಗೆ ಬರಬೇಕಿರುವ ಯಾವುದೇ ತರಹದ ಸುಸ್ತಿಬಾಕಿಯನ್ನು / ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನು ಕೊಟ್ಟು ಅಂತಹ ಸದಸ್ಯನು ಸಭಾ / ಚುನಾವಣಾ ದಿನಾಂಕದಿಂದ ಕನಿಷ್ಠ 15 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ. | (47) **ಮತ ನೀಡಿಕೆ :**<br>(3) ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ / ಚುನಾವಣೆಯ ದಿನಾಂಕದಿಂದ ಕನಿಷ್ಠ **50 ದಿನಗಳ** ಮುಂಚೆ ಬ್ಯಾಂಕಿಗೆ ಬರಬೇಕಿರುವ ಯಾವುದೇ ತರಹದ ಸುಸ್ತಿಬಾಕಿಯನ್ನು / ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನು ಕೊಟ್ಟು ಅಂತಹ ಸದಸ್ಯನು ಸಭಾ / ಚುನಾವಣಾ ದಿನಾಂಕದಿಂದ ಕನಿಷ್ಠ **30 ದಿನಗಳಿಗೆ** ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ. | |
| (53) | **ಪದಾಧಿಕಾರಿಗಳ ಚುನಾವಣೆ :**<br>(3) ಬ್ಯಾಂಕಿನ ಆಡಳಿತ ಮಂಡಲಿ **ಪದಾಧಿಕಾರಿಗಳೊಬ್ಬರ** ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು, ಸದರಿ **ಪದಾಧಿಕಾರಿ ಅಧಿಕಾರ ಸ್ವೀಕರಿಸಿ ಎರಡು ವರ್ಷಗಳಾಗಿರಬೇಕು. ಹಾಗೂ ಬ್ಯಾಂಕಿನ** ಆಡಳಿತ ಮಂಡಲಿಯ ಚುನಾಯಿತ ಸದಸ್ಯರಲ್ಲಿ ಮೂರನೇ ಒಂದರಷ್ಟು ಸದಸ್ಯರು ವಿನಂತಿ ಮಾಡದ ಹೊರತು ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ. ಒಂದು ವೇಳೆ ಆ ಅವಿಶ್ವಾಸ ನಿರ್ಣಯಕ್ಕೆ ಸೋಲು ಉಂಟಾದಲ್ಲಿ ಇನ್ನೊಮ್ಮೆ ಸದರಿ **ಪದಾಧಿಕಾರಿಯ** ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಒಂದು ವರ್ಷ ಕಾಯಬೇಕಾಗುತ್ತದೆ. | (53) **ಪದಾಧಿಕಾರಿಗಳ ಚುನಾವಣೆ :**<br>(3) **ಬ್ಯಾಂಕಿನ ಆಡಳಿತ ಮಂಡಲಿ ಪದಾಧಿಕಾರಿಗಳೊಬ್ಬರ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು, ಸದರಿ ಪದಾಧಿಕಾರಿ ಅಧಿಕಾರ ಸ್ವೀಕರಿಸಿ ಎರಡು ವರ್ಷಗಳಾಗಿರಬೇಕು.**<br>**(i) ಬ್ಯಾಂಕಿನ ಆಡಳಿತ ಮಂಡಲಿಯ ಚುನಾಯಿತ ಸದಸ್ಯರಲ್ಲಿ ಮೂರನೇ ಒಂದರಷ್ಟು ಸದಸ್ಯರು ವಿನಂತಿ ಮಾಡದ ಹೊರತು ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ.**<br>**(ii) ಅವಿಶ್ವಾಸ ಗೊತ್ತುವಳಿ ತಲುಪಿದ ಏಳು ದಿನಗಳೊಳಗಾಗಿ ಮುಖ್ಯ ಕಾರ್ಯನಿರ್ವಾಹಕನು ಅದರ ಪ್ರತಿಯನ್ನು ಕಾರ್ಯಕ್ಷೇತ್ರದ ನಿಬಂಧಕರಿಗೆ ತಲುಪಿಸತಕ್ಕದ್ದು.**<br>**(iii) ಕಾರ್ಯಕ್ಷೇತ್ರದ ನಿಬಂಧಕರಿಂದ ನೇಮಿಸ್ಪಟ್ಟ ಅಧಿಕೃತ ಅಧಿಕಾರಿಯು ಅವಿಶ್ವಾಸ ಗೊತ್ತುವಳಿಯನ್ನು ಪರಿಗಣಿಸಲು ಕರೆದ ಆಡಳಿತ ಮಂಡಲಿಯ ಸಭೆಯ ಸ್ಪಷ್ಟ 15ದಿನಗಳ ಸೂಚನೆಯನ್ನು ಚುನಾಯಿತ ಆಡಳಿತ ಮಂಡಲಿ ಸದಸ್ಯರಿಗೆ ನೀಡತಕ್ಕದ್ದು.**<br>**(iv) ಸೂಚನೆಯಲ್ಲಿ ಸಭೆಯ ದಿನಾಂಕ, ಸಮಯ ಮತ್ತು ಕಾರ್ಯಸೂಚಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.** | |

(v) ಸೂಚನೆಯನ್ನು ಕೈ ಹಸ್ತಾಂತರದ ಮೂಲಕ ಅಥವಾ ರಿಜಿಸ್ಟ್ರಾರ್ ಪೋಸ್ಟ್ ಮೂಲಕ ನೀಡಬಹುದು.

(vi) ಸಭೆಯ ಕೋರಂ ಆಡಳಿತ ಮಂಡಲಿಯ ಚುನಾಯಿತ ಸದಸ್ಯರ ಐವತ್ತು ಪ್ರತಿ ಶತಕ್ಕಿಂತ ಅಧಿಕ ಸಂಖ್ಯೆಯಲ್ಲಿರಬೇಕು. ಸಭೆಯಲ್ಲಿ ಭಾಗವಹಿಸುವ ಸದಸ್ಯರು ಸಭೆಯ ಪ್ರಾರಂಭದ ಮೊದಲು ಆ ಉದ್ದೇಶಕ್ಕಾಗಿ ಇರಿಸಲಾದ ಪುಸ್ತಕದಲ್ಲಿ ಸಹಿ ಹಾಕಬೇಕು. ಸಭೆಯ ಅಧ್ಯಕ್ಷತೆಯನ್ನು ಅಧಿಕೃತ ಅಧಿಕಾರಿಯವರು ವಹಿಸತಕ್ಕದ್ದು. ಸಭೆಗೆ ನಿಗದಿಯಾದ ಸಮಯದ ಅರ್ಧ ಘಂಟೆಯೊಳಗೆ ಕೋರಮ್ ರೂಪಗೊಳ್ಳದಿದ್ದಲ್ಲಿ ಸಭೆಯು ರದ್ದುಗೊಳ್ಳುತ್ತದೆ.

(vii) ಅವಿಶ್ವಾಸ ಮತವನ್ನು ಪರಿಗಣಿಸಲು ಕರೆದ ಆಡಳಿತ ಮಂಡಲಿ ಸಭೆಯನ್ನು ಯಾವುದೇ ಕಾರಣಕ್ಕಾಗಿ ಮುಂದೂಡಲಾಗದು.

(viii) ಸಭೆಯು ಪ್ರಾರಂಭವಾದ ತಕ್ಷಣ ಅಧಿಕೃತ ಅಧಿಕಾರಿಯು ಅವಿಸ್ವಾಸ ಗೊತ್ತುವಳಿಯನ್ನು ಮಂಡಿಸಬೇಕು ಮತ್ತು ಯಾವುದೇ ಚರ್ಚೆಯಿಲ್ಲದೆ ಗೊತ್ತುವಳಿಯನ್ನು ಮತದಾನಕ್ಕೆ ಇಡಬೇಕು.

(ix) ಮತದಾನವು ರಹಸ್ಯವಾಗಿರತಕ್ಕದ್ದು.

(x) ಬ್ಯಾಂಕಿನ ಆಡಳಿತ ಮಂಡಲಿ ಪದಾಧಿಕಾರಿಗಳೊಬ್ಬರ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಅದಕ್ಕಾಗಿಯೇ ಕರೆದ ವಿಶೇಷ ಸಭೆಯಲ್ಲಿ, ಬ್ಯಾಂಕಿನ ಚುನಾಯಿತ ನಿರ್ದೇಶಕರ, ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಸದಸ್ಯರು ಅನುಮೋದಿಸಿದಲ್ಲಿ, ಆ ಕ್ಷಣದಿಂದಲೇ ಸದರಿ ಸ್ಥಾನ ಖಾಲಿಯಾಗಿದೆ ಎಂದು ಪರಿಗಣಿಸಲಾಗುತ್ತದೆ.

(xi) ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಬ್ಯಾಂಕಿನ ಚುನಾಯಿತ ನಿರ್ದೇಶಕರ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಸದಸ್ಯರು ಅನುಮೋದಿಸಿದಲ್ಲಿ ಅಧಿಕೃತ ಅಧಿಕಾರಿಯು ಫಲಿತಾಂಶವನ್ನು ಘೋಷಿಸತಕ್ಕದ್ದು ಮತ್ತು ಅದನ್ನು ಬ್ಯಾಂಕಿನ ಸೂಚನಾ ಫಲಕದಲ್ಲಿ ಪ್ರದರ್ಶಿಸುವುದಲ್ಲದೇ, ಕಾರ್ಯ ಕ್ಷೇತ್ರದ ನಿಬಂಧಕರ ಅವಗಾಹನೆಗೆ ತರತಕ್ಕದ್ದು.

(xii) ಅವಿಶ್ವಾಸ ನಿರ್ಣಯ ಗೊತ್ತುವಳಿ ಸ್ವೀಕಾರವಾದ ತಕ್ಷಣ ಪದಾಧಿಕಾರಿ ಅಥವಾ ಪದಾಧಿಕಾರಿಗಳು ಯಾವುದೇ ಕಾರ್ಯ ನಿರ್ವಹಿಸುವಂತಿಲ್ಲ ಮತ್ತು ಸದರಿ ಸ್ಥಾನ ಖಾಲಿಯಾಗಿದೆ ಎಂದು ಪರಿಗಣಿಸಲಾಗುತ್ತದೆ.

(xiii) ಕಾಯ್ದೆ ಕಲಂ 29(ಇ) ಮತ್ತು 29(ಎಫ್) ಪ್ರಕಾರ ಪದಾಧಿಕಾರಿಗಳ ಚುನಾವಣೆಗೆ ಕ್ರಮ ಕೈಗೊಳ್ಳಬೇಕು. ಅದರಂತೆ

| | | | |
|---|---|---|---|
| | (4) ಬ್ಯಾಂಕಿನ ಆಡಳಿತ ಮಂಡಲಿ **ಪದಾಧಿಕಾರಿಗಳೊಬ್ಬರ ವಿರುದ್ಧ** ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಅದಕ್ಕಾಗಿಯೇ ಕರೆದ ವಿಶೇಷ ಸಭೆಯಲ್ಲಿ, ಬ್ಯಾಂಕಿನ ಚುನಾಯಿತ ನಿರ್ದೇಶಕರ, ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಸದಸ್ಯರು ಅನುಮೋದಿಸಿದಲ್ಲಿ, ಆ ಕ್ಷಣದಿಂದಲೇ ಸದರಿ ಸ್ಥಾನ ಖಾಲಿಯಾಗಿದೆ ಎಂದು ಪರಿಗಣಿಸಲಾಗುತ್ತದೆ. ಅವಿಶ್ವಾಸ ನಿರ್ಣಯ ಗೊತ್ತುವಳಿ ಮಂಡನೆಗೆ, ನಿಯಮಗಳಲ್ಲಿ ರೂಪಿಸಿರುವ ರೀತಿಯಲ್ಲೇ ವಿಧಾನಗಳನ್ನು ಅನುಸರಿಬೇಕಾಗುತ್ತದೆ. | **ಚುನಾಯಿತನಾದ ವ್ಯಕ್ತಿ / ವ್ಯಕ್ತಿಗಳ ಅಧಿಕಾರಾವಧಿಯು ಅವನ / ಅವರ ಹಿಂದಿನವರ ಉಳಿದಿರುವ ಅಧಿಕಾರಾವಧಿ-ಯವರೆಗಿರುತ್ತದೆ.**<br>**(xiv) ಒಂದು ವೇಳೆ ಆ ಅವಿಶ್ವಾಸ ನಿರ್ಣಯಕ್ಕೆ ಸೋಲು ಉಂಟಾದಲ್ಲಿ ಇನ್ನೊಮ್ಮೆ ಸದರಿ ಪದಾಧಿಕಾರಿಯ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಒಂದು ವರ್ಷ ಕಾಯಬೇಕಾಗುತ್ತದೆ.**<br>**(4) ಆಕಸ್ಮಿಕ ಖಾಲಿ ಸ್ಥಾನವನ್ನು ಸೇರಿದಂತೆ ಪದಾಧಿಕಾರಿಗಳ ಚುನಾವಣೆಗಾಗಿ ಕರೆದ ಮಂಡಲಿಯ ಸಭೆ ಕೋರಮ್ ಆಡಳಿತ ಮಂಡಲಿಯ ಚುನಾಯಿತ ಸದಸ್ಯರು ಐವತ್ತು ಪ್ರತಿಶತಕ್ಕಿಂತ ಅಧಿಕ ಸಂಖ್ಯೆಯಲ್ಲಿರಬೇಕು.** | |
| (68) | **ನೌಕರರ ಸೇವಾ ಷರತ್ತುಗಳು :**<br>(1) ನೇರ ನೇಮಕಾತಿ :<br>(ಎ) ಬ್ಯಾಂಕಿನ ಆಡಳಿತ ಮಂಡಲಿಯು, ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಪರಿಚಲನೆಯನ್ನುಳ್ಳ ಒಂದು ಕನ್ನಡ ಪತ್ರಿಕೆಯನ್ನು ಒಳಗೊಂಡಂತೆ ಎರಡು ವಾರ್ತಾ ಪತ್ರಿಕೆಗಳಲ್ಲಿ ಅಧಿಸೂಚಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಅಭ್ಯರ್ಥಿಗಳ ಲಿಖಿತ ಪರೀಕ್ಷೆ, ಸಹಜಶಕ್ತಿ (aptitude) ಪರೀಕ್ಷೆ ಮತ್ತು ಸಂದರ್ಶನಗಳನ್ನುಳ್ಳ ಒಂದು ಪಾರದರ್ಶಕ ಪ್ರಕ್ರಿಯೆಯನ್ನು ಅನುಸರಿಸಿ ಯಾವುದೇ ಹುದ್ದೆಯನ್ನು ನೇರ ನೇಮಕಾತಿಯಿಂದ ಭರ್ತಿ ಮಾಡತಕ್ಕದ್ದು. ನೇಮಕಾತಿಯಲ್ಲಿ ಪಾರದರ್ಶಕತೆ, ವೃತ್ತಿಪರತೆ ಮತ್ತು ವಸ್ತುನಿಷ್ಠತೆಯನ್ನು ಕಾಪಾಡುವ ದೃಷ್ಟಿಯಿಂದ ಆಡಳಿತ ಮಂಡಲಿಯು ಲಿಖಿತ ಪರೀಕ್ಷೆಯನ್ನು ನಡೆಸುವ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಭಾರತೀಯ ವ್ಯವಸ್ಥಾಪನಾ ಸಂಸ್ಥೆ, ಆರ್ಥಿಕ ಮತ್ತು ಸಾಮಾಜಿಕ ಬದಲಾವಣಾ ಸಂಸ್ಥೆ, ಬೆಂಗಳೂರು ಇತ್ಯಾದಿ ಬಾಹ್ಯ ಪ್ರತಿಷ್ಠಿತ ಸಂಸ್ಥೆಗೆ ವಹಿಸತಕ್ಕದ್ದು ಪರಂತು, ಈ ನಿರ್ಬಂಧವು– | (68) **ನೌಕರರ ಸೇವಾ ಷರತ್ತುಗಳು :**<br>(1) ನೇರ ನೇಮಕಾತಿ :<br>(ಎ) ಬ್ಯಾಂಕಿನ ಆಡಳಿತ ಮಂಡಲಿಯು, ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಪರಿಚಲನೆಯನ್ನುಳ್ಳ ಎರಡು ಕನ್ನಡ ಮತ್ತು ಒಂದು ಆಂಗ್ಲ ಪತ್ರಿಕೆಯನ್ನು ಒಳಗೊಂಡಂತೆ ಮೂರು ವಾರ್ತಾ ಪತ್ರಿಕೆಗಳಲ್ಲಿ ಅಧಿಸೂಚಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಅಭ್ಯರ್ಥಿಗಳ ಲಿಖಿತ ಪರೀಕ್ಷೆ, ಸಹಜಶಕ್ತಿ (aptitude) ಪರೀಕ್ಷೆ ಮತ್ತು ಸಂದರ್ಶನ-ಗಳನ್ನುಳ್ಳ ಒಂದು ಪಾರದರ್ಶಕ ಪ್ರಕ್ರಿಯೆಯನ್ನು ಅನುಸರಿಸಿ ಯಾವುದೇ ಹುದ್ದೆಯನ್ನು ನೇರ ನೇಮಕಾತಿಯಿಂದ ಭರ್ತಿ ಮಾಡತಕ್ಕದ್ದು. **ದ್ವಿತಿಯ ವಿಭಾಗ ಸಹಾಯಕ ಮತ್ತು ಅದಕ್ಕಿಂತ ಮೇಲ್ಪಟ್ಟ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಲಿಖಿತ ಪರೀಕ್ಷೆಯಲ್ಲಿ ಒಟ್ಟು 200 ಅಂಕಗಳಿದ್ದು ಅದರಲ್ಲಿ ಕನ್ನಡ ಭಾಷೆಗೆ 50 ಅಂಕಗಳು, ಸಾಮಾನ್ಯ ಆಂಗ್ಲಭಾಷೆಗೆ 25 ಅಂಕಗಳು, ಸಾಮಾನ್ಯ ಜ್ಞಾನಕ್ಕೆ 25 ಅಂಕಗಳು, ಸಹಕಾರ ವಿಷಯಗಳಿಗೆ 50 ಅಂಕಗಳು, ಭಾರತದ ಸಂವಿಧಾನದ ವಿಷಯಕ್ಕೆ 25 ಅಂಕಗಳು ಮತ್ತು ಬ್ಯಾಂಕಿನ ಚಟುವಟಿಕೆಗೆ ಸಂಬಂಧಿಸಿದ ವಿಷಯಕ್ಕೆ 25 ಅಂಕಗಳು ಇರತಕ್ಕದ್ದು. ಕಂಪ್ಯೂಟರ್ ಪ್ರೋಗ್ರಾಮರ್, ಡಾಟಾ ಎಂಟ್ರಿ ಆಪರೇಟರ್, ಸ್ಟೆನೊಗ್ರಾಫರ್ ಮತ್ತು ಬೆರಳಚ್ಚುದಾರ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಲಿಖಿತ ಪರೀಕ್ಷೆಯಲ್ಲಿ ಭಾರತದ ಸಂವಿಧಾನ, ಸಹಕಾರ ಮತ್ತು ಬ್ಯಾಂಕಿನ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳ ಬದಲಾಗಿ ಗಣಕಯಂತ್ರ ಪರೀಕ್ಷೆ ಮತ್ತು ಶೀಘ್ರಲಿಪಿ ಅಥವಾ ಬೆರಳಚ್ಚಿಗೆ ಸಂಬಂಧಿಸಿದ ವಿಷಯಗಳಿಗೆ 100 ಅಂಕಗಳು ಇರತಕ್ಕದ್ದು.** | |

| | | | |
|---|---|---|---|
| | | **ಲಿಖಿತ ಪರೀಕ್ಷೆಗೆ ಅಭ್ಯರ್ಥಿ ಗಳನ್ನು ಸೂಚಿಸಿದ ಹುದ್ದೆಯ 1:20 ರ ಅನುಪಾತದಲ್ಲಿ ಕರೆಯಬೇಕು. ಲಿಖಿತ ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇಕಡಾವಾರು ಆಧಾರದ ಮೇಲೆ 1:5ರ ಅನುಪಾತದಲ್ಲಿ ಸಂದರ್ಶಕ್ಕಾಗಿ ಕರೆಯಬೇಕು.** ನೇಮಕಾತಿಯಲ್ಲಿ ಪಾರದರ್ಶಕತೆ, ವೃತ್ತಿಪರತೆ ಮತ್ತು ವಸ್ತುನಿಷ್ಠತೆಯನ್ನು ಕಾಪಾಡುವ ದೃಷ್ಟಿಯಿಂದ ಆಡಳಿತ ಮಂಡಲಿಯು ಲಿಖಿತ ಪರೀಕ್ಷೆಯನ್ನು ನಡೆಸುವ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಭಾರತೀಯ ವ್ಯವಸ್ಥಾಪನಾ ಸಂಸ್ಥೆ, ಆರ್ಥಿಕ ಮತ್ತು ಸಾಮಾಜಿಕ ಬದಲಾವಣಾ ಸಂಸ್ಥೆ, ಬೆಂಗಳೂರು ಇತ್ಯಾದಿ ಬಾಹ್ಯ ಪ್ರತಿಷ್ಠಿತ ಸಂಸ್ಥೆಗೆ ವಹಿಸತಕ್ಕದ್ದು ಪರಂತು, ಈ ನಿರ್ಬಂಧವು– | |
| | **(i)** ಸರ್ಕಾರದಿಂದ ಅಥವಾ ವಾಣಿಜ್ಯ ಬ್ಯಾಂಕಿನಿಂದ ಅಥವಾ ಇತರ ಉನ್ನತ ಸಹಕಾರ ಬ್ಯಾಂಕಿನಿಂದ ಅಥವಾ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಪಟ್ಟ ಯಾವುದೇ ಪ್ರತಿಷ್ಠಿತ ಸಂಸ್ಥೆಯಿಂದ ಎರವಲು ಸೇವೆಯ ಆಧಾರದ ಮೇಲೆ ಮಾಡುವ ನೇಮಕ : | **(i) ಸರ್ಕಾರದಿಂದ ಎರವಲು ಸೇವೆಯ ಆಧಾರದ ಮೇಲೆ ಮಾಡುವ ನೇಮಕ :** | |
| | **(ii)** ಈ ನಿಯಮಗಳಲ್ಲಿ ತಿಳಿಸಿರುವ ಮಾರ್ಗ ಸೂಚಿಗಳನ್ವಯ ಅನುಕಂಪದ ಆಧಾರದ ಮೇಲೆ ಯಾವುದೇ ಹುದ್ದೆಗೆ ಮಾಡುವ ನೇಮಕ. | **(ii)** ಈ ನಿಯಮಗಳಲ್ಲಿ ತಿಳಿಸಿರುವ ಮಾರ್ಗ ಸೂಚಿಗಳನ್ವಯ ಅನುಕಂಪದ ಆಧಾರದ ಮೇಲೆ ಯಾವುದೇ ಹುದ್ದೆಗೆ ಮಾಡುವ ನೇಮಕ. | |
| | **(iii)** ರಿಜಿಸ್ಟ್ರಾರನು ಅನುಮೋದಿಸುವ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕ್ಯಾಂಪಸ್ ಪ್ಲೇಸ್‌ಮೆಂಟ್ ಮೂಲಕ ಯಾವುದೇ ಹುದ್ದೆಗೆ ಮಾಡುವ ನೇಮಕ. | **(iii)** ರಿಜಿಸ್ಟ್ರಾರನು ಅನುಮೋದಿಸುವ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕ್ಯಾಂಪಸ್ ಪ್ಲೇಸ್‌ಮೆಂಟ್ ಮೂಲಕ ಯಾವುದೇ ಹುದ್ದೆಗೆ ಮಾಡುವ ನೇಮಕ. | |
| | **(iv)** ಬ್ಯಾಂಕಿನ ತುರ್ತಾದ / ಅತ್ಯಗತ್ಯವಾದ ಸೇವೆಗೆ ಸಾಮಾನ್ಯವಾಗಿ ಹನ್ನೊಂದು ತಿಂಗಳ ಅವಧಿಗೆ ಮೀರದಂತೆ ಗುತ್ತಿಗೆ ಆಧಾರದ ಮೇಲೆ ಮಾಡುವ ನೇಮಕಗಳಿಗೆ ಅನ್ವಯಿಸತಕ್ಕದ್ದಲ್ಲ. | **(iv) ನಿಬಂಧಕರ ಅನುಮತಿ ಪಡೆದು ಬ್ಯಾಂಕಿನ ತುರ್ತಾದ/ ಅತ್ಯಗತ್ಯವಾದ ಸೇವೆಗೆ ಸಾಮಾನ್ಯವಾಗಿ ಹನ್ನೊಂದು ತಿಂಗಳ ಅವಧಿಗೆ ಮೀರದಂತೆ ಹೊರ ಗುತ್ತಿಗೆ ಆಧಾರದ ಮೇಲೆ ದ್ವಿತೀಯ ವಿಭಾಗದ ಸಹಾಯಕ ಅಥವಾ ಸಮಾನವಾದ ಮತ್ತು ಅದಕ್ಕಿಂತ ಕೆಳಗಿನ ಹುದ್ದೆಗಳಿಗೆ ಮಾಡುವ ನೇಮಕಗಳಿಗೆ ಅನ್ವಯಿಸತಕ್ಕದ್ದಲ್ಲ.** | |
| | (ಬಿ) ನೇರನೇಮಕಾತಿ ಮಾಡುವ ಸಲುವಾಗಿ ಅಧ್ಯಕ್ಷರು, ಒಬ್ಬ ಮಂಡಲಿಯ ನಿರ್ದೇಶಕರು, ನಿಬಂಧಕರು ಅಥವಾ ಅವರ ನಾಮಿನಿ ಮಂಡಲಿಯಿಂದ ನಾಮಕರಣಗೊಂಡ ಸಹಕಾರ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನುಭವ ಹೊಂದಿದ ಒಬ್ಬ ತಜ್ಞ ಮತ್ತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಇವರನ್ನೊಳಗೊಂಡ ಐದು ಜನರ ಸಮಿತಿ ಇರತಕ್ಕದ್ದು. ಅಧ್ಯಕ್ಷರು ಸದರಿ ಸಮಿತಿಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸದರಿ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ. ಈ ಸಭೆಗಳಿಗೆ ಕೋರಂ ಮೂರು ಜನ ಆಗಿರತಕ್ಕದ್ದು. | (ಬಿ) ನೇರನೇಮಕಾತಿ ಮಾಡುವ ಸಲುವಾಗಿ ಅಧ್ಯಕ್ಷರು, ಒಬ್ಬ ಮಂಡಲಿಯ ನಿರ್ದೇಶಕರು, ನಿಬಂಧಕರು ಅಥವಾ ಅವರ ನಾಮಿನಿ, ಮಂಡಲಿಯಿಂದ ನಾಮಕರಣಗೊಂಡ ಸಹಕಾರ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನುಭವ ಹೊಂದಿದ **ಬ್ಯಾಂಕಿನ ನಿರ್ದೇಶಕರನ್ನು ಹೊರತು ಪಡಿಸಿ** ಒಬ್ಬ ತಜ್ಞ ಮತ್ತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಇವರನ್ನೊಳಗೊಂಡ ಐದು ಜನರ ಸಮಿತಿ ಇರತಕ್ಕದ್ದು. ಅಧ್ಯಕ್ಷರು ಸದರಿ ಸಮಿತಿಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸದರಿ ಸಮಿತಿಯ ಕಾರ್ಯದರ್ಶಿ–ಯಾಗಿ ಕಾರ್ಯ ನಿರ್ವಹಿಸುತ್ತಾರೆ. ಈ ಸಭೆಗಳಿಗೆ ಕೋರಂ **ನಿಬಂಧಕರು ಅಥವಾ ಅವರಿಂದ ನಾಮಕರಣಗೊಂಡ ಪ್ರತಿನಿಧಿ ಸೇರಿ** ಮೂರು ಜನ ಆಗಿರತಕ್ಕದ್ದು. | |

| | | | |
|---|---|---|---|
| | (ಸಿ) ಬಾಹ್ಯ ಮೂಲದ ಸಂಸ್ಥೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡಾ 85ಕ್ಕೆ ಇಳಿಸತಕ್ಕದ್ದು ಹಾಗೂ ಸಹಜಶಕ್ತಿ ಪರೀಕ್ಷೆ ಮತ್ತು ಸಂದರ್ಶನಕ್ಕೆ ಹದಿನೈದು ಅಂಕಗಳು ಇರತಕ್ಕದ್ದು. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕ–ಗಳನ್ನು ಶೇಕಡಾ 85ಕ್ಕೆ ಇಳಿಸಿದಾಗ ಪ್ರಾಪ್ತವಾಗುವ ಅಂಕಗಳ ಹಾಗೂ ಸಹಜಶಕ್ತಿ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಗಳಿಸಿದ ಅಂಕಗಳ ಮೊತ್ತದ ಆಧಾರದ ಮೇಲೆ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸತಕ್ಕದ್ದು. ಅನ್ವಯವಾಗುವಷ್ಟರ ಮಟ್ಟಿಗೆ ಮೀಸಲಾತಿಯನ್ನು ಆಧರಿಸಿ ಅರ್ಹತಾ ಪಟ್ಟಿಯ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ತಯಾರಿಸತಕ್ಕದ್ದು. | (ಸಿ) ಬಾಹ್ಯ ಮೂಲದ ಸಂಸ್ಥೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡಾ 85ಕ್ಕೆ ಇಳಿಸತಕ್ಕದ್ದು ಹಾಗೂ ಸಹಜಶಕ್ತಿ ಪರೀಕ್ಷೆ ಮತ್ತು ಸಂದರ್ಶನಕ್ಕೆ ಹದಿನೈದು ಅಂಕಗಳು ಇರತಕ್ಕದ್ದು. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡಾ 85ಕ್ಕೆ ಇಳಿಸಿದಾಗ ಪ್ರಾಪ್ತವಾಗುವ ಅಂಕಗಳ ಹಾಗೂ ಸಹಜಶಕ್ತಿ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಗಳಿಸಿದ ಅಂಕಗಳ ಮೊತ್ತದ ಆಧಾರದ ಮೇಲೆ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸತಕ್ಕದ್ದು. ಅನ್ವಯವಾಗುವಷ್ಟರ ಮಟ್ಟಿಗೆ ಮೀಸಲಾತಿಯನ್ನು ಆಧರಿಸಿ ಅರ್ಹತಾ ಪಟ್ಟಿಯ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ತಯಾರಿಸತಕ್ಕದ್ದು.<br>**(ಡಿ) ಚಾಲಕರು ಮತ್ತು ಗುಂಪು–ಡಿ ಸೇವೆಗಳ ಹುದ್ದೆಗೆ ನೇಮಕಾತಿಗಾಗಿ ಹುದ್ದೆಯ 1:5 ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸೂಚಿಸಲಾದ ಅರ್ಹತಾ ಪರೀಕ್ಷೆಯಲ್ಲಿ ಅವರು ಪಡೆದ ಅಂಕದ ಆಧಾರದಲ್ಲಿ ಸಂದರ್ಶನಕ್ಕಾಗಿ ಕರೆಯಬೇಕು. ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡಾ 85 ಕ್ಕೆ ಇಳಿಸಿ ಸಂದರ್ಶನಕ್ಕೆ ಶೇಕಡಾ 15 ಅಂಕಗಳನ್ನು ನೀಡಬೇಕು.**<br>(ಇ) **ಆಡಳಿತ ಮಂಡಲಿಯು ತಮ್ಮ ಕಾರ್ಯಕಾಲದ ಕೊನೆಯ ಮೂರು ತಿಂಗಳಲ್ಲಿ ಯಾವುದೇ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಬಾರದು.** | |
| | **(2) ನೇರ ನೌಕರಿ ಭರ್ತಿಗೆ ವಯೋಮಿತಿ :**<br>ಬ್ಯಾಂಕಿನ ಯಾವುದೇ ಸೇವೆಯ ಹುದ್ದೆಗೆ ನೇರ ನೌಕರಿ ಭರ್ತಿಯ ನೇಮಕಾತಿಗೆ ಪ್ರತಿ ಅಭ್ಯರ್ಥಿಗೆ ಹದಿನೆಂಟು ವರ್ಷ ವಯಸ್ಸು ತುಂಬಿ–ರತಕ್ಕದ್ದು ಹಾಗೂ ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು, ಅಥವಾ ಸಂದರ್ಭಾನುಸಾರ ನೇಮಕಾತಿ ಪ್ರಾಧಿಕಾರ ಅಥವಾ ನೌಕರಿ ಭರ್ತಿಯ ಸಮಿತಿಯು ನಿರ್ದಿಷ್ಟಪಡಿಸಿದ ಇತರೆ ಯಾವುದೇ ದಿನಾಂಕದಂದು ಕೆಳಗಿನ ವಯಸ್ಸಿಗೆ ಮೀರದಂತೆ ಇರತಕ್ಕದ್ದು.<br>ಅಭ್ಯರ್ಥಿಯು ಯಾವುದೇ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಅಥವಾ ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಯ ಸಂಬಂಧದಲ್ಲಿ – ನಲವತ್ತು ವರ್ಷ.<br>ಅಭ್ಯರ್ಥಿಯು ಯಾವುದೇ ಹಿಂದುಳಿದ ಜಾತಿ ಅಥವಾ ಹಿಂದುಳಿದ ಸಮಾಜಕ್ಕೆ ಸೇರಿದ ಅಭ್ಯರ್ಥಿಯ ಸಂಬಂಧದಲ್ಲಿ – ಮೂವತ್ತೆಂಟು ವರ್ಷ.<br>ಉಳಿದ ಅಭ್ಯರ್ಥಿಯ ಸಂಬಂಧದಲ್ಲಿ – ಮೂವತ್ತೈದು ವರ್ಷ.<br>ಪರಂತು, ಈ ನಿರ್ಬಂಧವು, ಬ್ಯಾಂಕಿಗೆ ಯಾರ ಸೇವೆಯನ್ನು ಎರವಲು ಪಡೆಯಲಾಗಿದೆಯೋ ಆ ನೌಕರನಿಗೆ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಕವಾದ ನೌಕರನಿಗೆ ಅಥವಾ ಯಾವುದೇ ಸಹಕಾರ ಸಂಘದ ಸೇವೆಯಲ್ಲಿ ಈಗಾಗಲೇ ಇರುವ ಯಾವ ವ್ಯಕ್ತಿಯ ವಯಸ್ಸು ಅಂಥ ಸೇವೆಗೆ ಸೇರುವ ಕಾಲದಲ್ಲಿ ಸಂಬಂಧಪಟ್ಟ ಪ್ರದೇಶಕ್ಕೆ ಅನ್ವಯಿಸುವ ಆಗ ಜಾರಿಯಲ್ಲಿದ್ದ ನಿಯಮಗಳಿಗೆ ಅನುಸಾರವಾಗಿದ್ದಲ್ಲಿ, ಅಂಥ ವ್ಯಕ್ತಿಗೆ ಅನ್ವಯವಾಗತಕ್ಕುದಲ್ಲ. | **(2) ನೇರ ನೌಕರಿ ಭರ್ತಿಗೆ ವಯೋಮಿತಿ :**<br>ಬ್ಯಾಂಕಿನ ಯಾವುದೇ ಸೇವೆಯ ಹುದ್ದೆಗೆ ನೇರ ನೌಕರಿ ಭರ್ತಿಯ ನೇಮಕಾತಿಗೆ ಪ್ರತಿ ಅಭ್ಯರ್ಥಿಗೆ ಹದಿನೆಂಟು ವರ್ಷ ವಯಸ್ಸು ತುಂಬಿರ–ತಕ್ಕದ್ದು ಹಾಗೂ ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು, ಅಥವಾ ಸಂದರ್ಭಾನುಸಾರ ನೇಮಕಾತಿ ಪ್ರಾಧಿಕಾರ ಅಥವಾ ನೌಕರಿ ಭರ್ತಿಯ ಸಮಿತಿಯು ನಿರ್ದಿಷ್ಟಪಡಿಸಿದ ಇತರೆ ಯಾವುದೇ ದಿನಾಂಕದಂದು ಕೆಳಗಿನ ವಯಸ್ಸಿಗೆ ಮೀರದಂತೆ ಇರತಕ್ಕದ್ದು<br>ಅಭ್ಯರ್ಥಿಯು ಯಾವುದೇ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಅಥವಾ **ವಿಭಾಗ–1 ಇತರೆ ಹಿಂದುಳಿದ ವರ್ಗಕ್ಕೆ** ಸೇರಿದ ಅಭ್ಯರ್ಥಿಯ ಸಂಬಂಧದಲ್ಲಿ – ನಲವತ್ತು ವರ್ಷ.<br>ಅಭ್ಯರ್ಥಿಯು ಯಾವುದೇ ಹಿಂದುಳಿದ ಜಾತಿ ಅಥವಾ ಹಿಂದುಳಿದ ಸಮಾಜಕ್ಕೆ ಸೇರಿದ ಅಭ್ಯರ್ಥಿಯ ಸಂಬಂಧದಲ್ಲಿ–ಮೂವತ್ತೆಂಟು ವರ್ಷ.<br>ಉಳಿದ ಅಭ್ಯರ್ಥಿಯ ಸಂಬಂಧದಲ್ಲಿ – ಮೂವತ್ತೈದು ವರ್ಷ.<br>ಪರಂತು, ಈ ನಿರ್ಬಂಧವು, ಬ್ಯಾಂಕಿಗೆ ಯಾರ ಸೇವೆಯನ್ನು ಎರವಲು ಪಡೆಯಲಾಗಿದೆಯೋ ಆ ನೌಕರನಿಗೆ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಕವಾದ ನೌಕರನಿಗೆ ಅಥವಾ ಯಾವುದೇ ಸಹಕಾರ ಸಂಘದ ಸೇವೆಯಲ್ಲಿ ಈಗಾಗಲೇ ಇರುವ ಯಾವ ವ್ಯಕ್ತಿಯ ವಯಸ್ಸು ಅಂಥ ಸೇವೆಗೆ ಸೇರುವ ಕಾಲದಲ್ಲಿ ಸಂಬಂಧಪಟ್ಟ ಪ್ರದೇಶಕ್ಕೆ ಅನ್ವಯಿಸುವ ಆಗ ಜಾರಿಯಲ್ಲಿದ್ದ ನಿಯಮಗಳಿಗೆ ಅನುಸಾರವಾಗಿದ್ದಲ್ಲಿ, ಅಂಥ ವ್ಯಕ್ತಿಗೆ ಅನ್ವಯವಾಗತಕ್ಕುದಲ್ಲ. | |

**(4) ನಿವೃತ್ತಿ ವಯಸ್ಸು :**

ಯಾವುದೇ ಬ್ಯಾಂಕಿನ ನೌಕರ ಅಥವಾ ಅಧಿಕಾರಿಯ ವಯೋನಿವೃತ್ತಿ ದಿನಾಂಕವು ಆತನು ಅರವತ್ತು ವರ್ಷಗಳ ವಯಸ್ಸನ್ನು ಪೂರೈಸುವ ದಿನಾಂಕವಾಗಿರತಕ್ಕದ್ದು. ಯಾವುದೇ ತಿಂಗಳ ಪ್ರಥಮ ದಿನದ ನಂತರದ ಯಾವುದೇ ದಿನದಂದು ಆದರೆ ತಿಂಗಳ ಕೊನೆಯ ದಿನಕ್ಕೆ ಮೊದಲು ಒಬ್ಬ ನೌಕರನು ವಯೋನಿವೃತ್ತಿಯ ವಯಸ್ಸನ್ನು ಪೂರೈಸಿದ್ದಲ್ಲಿ ಮತ್ತು ಅಂಥಹ ನೌಕರನು ಲಿಖಿತದಲ್ಲಿ ಇಚ್ಛೈಸಿದಲ್ಲಿ, ಬ್ಯಾಂಕಿನ ಆಡಳಿತ ಮಂಡಲಿಯು ಆತನು ತಿಂಗಳ ಕೊನೆಯ ದಿನದಂದು ನಿವೃತ್ತಿ ಹೊಂದಲು ಅನುಮತಿ ನೀಡಬಹುದು. ಆದಾಗ್ಯೂ ಯಾವುದೇ ನೌಕರನು ಐವತ್ತು ವರ್ಷಗಳನ್ನು ಪೂರೈಸಿದ ನಂತರದ ಯಾವುದೇ ದಿನದಂದು ಸ್ವಇಚ್ಛೆಯಿಂದ ನಿವೃತ್ತಿ ಹೊಂದಲು ಲಿಖಿತದಲ್ಲಿ ಮನವಿ ಸಲ್ಲಿಸಿದಲ್ಲಿ, ಆತನ ಮನವಿಯನ್ನು ಪರಿಗಣಿಸಿ ಮಂಡಲಿಯು ಆತನಿಗೆ ಸ್ವಇಚ್ಛೆ ನಿವೃತ್ತಿ ಹೊಂದಲು ಅನುಮತಿ ನೀಡಬಹುದು.

**(8) ವರ್ಗಾವಣೆ ಮತ್ತು ಪದೋನ್ನತಿ :**

(i) ಯಾವುದೇ ಹುದ್ದೆಯ ನೇರ ಭರ್ತಿಗೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನುಳ್ಳ ಮತ್ತು ಆ ಹುದ್ದೆಯಲ್ಲಿ ಕನಿಷ್ಠ ಪಕ್ಷ ಐದು ವರ್ಷಗಳ ಸಮರ್ಪಕ ಸೇವೆಯನ್ನು ಸಲ್ಲಿಸಿರುವ ಒಬ್ಬ ನೌಕರನು ಬ್ಯಾಂಕಿನ ಕಾಡರ್ ಮತ್ತು ನೇಮಕಾತಿ ನಿಯಮಗಳನ್ವಯ ಉನ್ನತ ಹುದ್ದೆಗೆ ಪದೋನ್ನತಿಗಾಗಿ ಪರಿಗಣಿಸಲು ಅರ್ಹನಾಗತಕ್ಕದ್ದು. ಪರಂತು, ಬ್ಯಾಂಕಿನ ಉದ್ದೇಶ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯದ ಬಗ್ಗೆ ಕೆಳಗಿನ ಸಂಸ್ಥೆಗಳು ನಡೆಸುವ ಅಲ್ಪಾವಧಿ ತರಬೇತಿ ಕೋರ್ಸನ್ನು ಸಮರ್ಪಕವಾಗಿ ಪೂರ್ಣಗೊಳಿಸದ ಯಾವುದೇ ನೌಕರನನ್ನು ಮೇಲಿನ ಉನ್ನತ ಹುದ್ದೆಗೆ ಪದೋನ್ನತಿಗೊಳಿಸತಕ್ಕದ್ದಲ್ಲ. ಪ್ರಾಂತೀಯ ಸಹಕಾರ ವ್ಯವಸ್ಥಾಪನಾ ಸಂಸ್ಥೆ, ಬೆಂಗಳೂರು ಅಥವಾ ವೈಕುಂಠ ಮೆಹತಾ ಸಹಕಾರಿ ವ್ಯವಸ್ಥಾಪನಾ ಸಂಸ್ಥೆ, ಪುಣೆ ಅಥವಾ ರಿಸರ್ವ್ ಬ್ಯಾಂಕಿನ ಕೃಷಿ ಬ್ಯಾಂಕಿಂಗ್ ಕಾಲೇಜು, ಪುಣೆ ಮತ್ತು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗೆಳೂರು. ಮತ್ತು ಪರಂತು, ಬ್ಯಾಂಕಿನ ಆಡಳಿತ ಮಂಡಲಿಯು ಪ್ರತಿ ನೌಕರನನ್ನು ಮೇಲಿನೆ ಸಂಸ್ಥೆಗಳು ನಡೆಸುವ ತರಬೇತಿ ಕಾರ್ಯಕ್ರಮಗಳಿಗೆ ಕನಿಷ್ಠ ಮೂರು ವರ್ಷಕ್ಕೊಮ್ಮೆ ನಿಯೋಜಿಸತಕ್ಕದ್ದು. ಮತ್ತು ಆಡಳಿತ ಮಂಡಲಿಯು ತರಬೇತಿಗೆ ಹಾಜರಾಗಲು ಮತ್ತು ಪೂರ್ಣಗೊಳಿಸಲು ಯಾವುದೇ ವಿನಾಯಿತಿಯನ್ನು ನೀಡತಕ್ಕದ್ದಲ್ಲ.

ಮತ್ತು ಪರಂತು, ತರಬೇತಿಯ ಕಾರ್ಯಕ್ರಮಕ್ಕೆ ಹಾಜರಾಗದ ಯಾವುದೇ ನೌಕರನಿಗೆ ವಾರ್ಷಿಕ ವೇತನ ಹೆಚ್ಚಳವನ್ನು ಮಂಜೂರು ಮಾಡತಕ್ಕದಲ್ಲ.

(ii) ಮುಖ್ಯ ಕಾರ್ಯನಿರ್ವಾಹಕನು ಅಥವಾ ಇತರ ಸಕ್ಷಮ ಪ್ರಾಧಿಕಾರವು ಒಬ್ಬ ನೌಕರನನ್ನು ಒಂದು ಹುದ್ದೆಯಿಂದ ಇನ್ನೊಂದು ಹುದ್ದೆಗೆ ವರ್ಗಾವಣೆ ಮಾಡಬಹುದು. ಆದರೆ, ಹಾಗೆ ಮಾಡುವಾಗ, ಹಣ ದುರುಪಯೋಗ, ಮೋಸ ಅಥವಾ ವಂಚನೆ, ಲೆಕ್ಕಗಳ ತಪ್ಪು ವರ್ಗೀಕರಣ ಇತ್ಯಾದಿ ಗುರುತರ ಅಕ್ರಮಗಳನ್ನು ಎಸಗಿರುವ ಆರೋಪ ಹೊತ್ತಿರುವ ನೌಕರನನ್ನು ಹೊರತುಪಡಿಸಿ, ಒಬ್ಬ ನೌಕರನು ಒಂದು ಹುದ್ದೆಯಲ್ಲಿ ಕನಿಷ್ಠ ಪಕ್ಷ ಮೂರು ವರ್ಷಗಳ ಸೇವೆ ಸಲ್ಲಿಸಿರುವುದನ್ನು ಖಾತರಿಪಡಿಸತಕ್ಕದ್ದು.

**(4) ನಿವೃತ್ತಿ ವಯಸ್ಸು : ಯಾವುದೇ ಬ್ಯಾಂಕಿನ ನೌಕರ ಅಥವಾ ಅಧಿಕಾರಿಯ ವಯೋನಿವೃತ್ತಿ ದಿನಾಂಕವು ಆತನು ಅರವತ್ತು ವರ್ಷಗಳ ವಯಸ್ಸನ್ನು ಪೂರೈಸುವ ತಿಂಗಳ ಕೊನೆಯ ದಿನಾಂಕವಾಗಿರತಕ್ಕದ್ದು. ಯಾವುದೇ ತಿಂಗಳ ಪ್ರಥಮ ದಿನದ ನಂತರದ ಯಾವುದೇ ದಿನದಂದು ಒಬ್ಬ ನೌಕರನು ವಯೋನಿವೃತ್ತಿಯ ವಯಸ್ಸನ್ನು ಪೂರೈಸಿದ್ದಲ್ಲಿ ಆತನು ತಿಂಗಳ ಕೊನೆಯ ದಿನದಂದು ನಿವೃತ್ತಿ ಹೊಂದುವನು. ಆದರೆ ಯಾವುದೇ ಬ್ಯಾಂಕಿನ ನೌಕರ ಅಥವಾ ಅಧಿಕಾರಿಯ ಜನ್ಮ ದಿನಾಂಕ ತಿಂಗಳ ಪ್ರಥಮ ದಿನವಾಗಿದ್ದರೆ ಆತನು ತನ್ನಆರವತ್ತು ವರ್ಷಗಳ ವಯಸ್ಸನ್ನು ಪೂರೈಸುವ ಹಿಂದಿನ ತಿಂಗಳ ಕೊನೆಯ ದಿನದ ಮಧ್ಯಾಹ್ನ ನಿವೃತ್ತಿ ಹೊಂದುವನು. ಆದಾಗ್ಯೂ ಬ್ಯಾಂಕಿನ ಉಪ–ನಿಯಮದಲ್ಲಿ ಪ್ರಾವದಾನವಿದ್ದಲ್ಲಿ ಯಾವುದೇ ನೌಕರನು ತನ್ನ 15 ವರ್ಷಗಳ ಸಮರ್ಪಕ ಸೇವೆಯ ನಂತರ ಅಥವಾ ಐವತ್ತು ವರ್ಷಗಳನ್ನು ಪೂರೈಸಿದ ನಂತರದ ಯಾವುದೇ ದಿನದಂದು ಸ್ವಇಚ್ಛೆಯಿಂದ ನಿವೃತ್ತಿ ಹೊಂದಲು ಲಿಖಿತದಲ್ಲಿ ಮನವಿ ಸಲ್ಲಿಸಿದಲ್ಲಿ, ಆತನ ಮನವಿಯನ್ನು ಪರಿಗಣಿಸಿ ಮಂಡಲಿಯು ಆತನಿಗೆ ಸ್ವಇಚ್ಛೆ ನಿವೃತ್ತಿ ಹೊಂದಲು ಅನುಮತಿ ನೀಡಬಹುದು.**

**(8) ವರ್ಗಾವಣೆ ಮತ್ತು ಪದೋನ್ನತಿ :**

(i) ಯಾವುದೇ ಹುದ್ದೆಯ ನೇರ ಭರ್ತಿಗೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನುಳ್ಳ ಮತ್ತು ಆ ಹುದ್ದೆಯಲ್ಲಿ ಕನಿಷ್ಠ ಪಕ್ಷ ಐದು ವರ್ಷಗಳ ಸಮರ್ಪಕ ಸೇವೆಯನ್ನು ಸಲ್ಲಿಸಿರುವ ಒಬ್ಬ ನೌಕರನು ಬ್ಯಾಂಕಿನ ಕಾಡರ್ ಮತು ನೇಮಕಾತಿ ನಿಯಮಗಳನ್ವಯ ಉನ್ನತ ಹುದ್ದೆಗೆ ಪದೋನ್ನತಿಗಾಗಿ ಪರಿಗೆಣಿಸಲು ಅರ್ಹನಾಗತಕ್ಕದ್ದು.

**ಪರಂತು, ಬ್ಯಾಂಕಿನ ಉದ್ದೇಶ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಈ ಕೆಳಗಿನ ಯಾವುದಾದರೊಂದು ವಿಷಯದ ಬಗ್ಗೆ ಡಿಪ್ಲೋಮಾವನ್ನು ಮಾನ್ಯತೆ ಪಡೆದ ಸಂಸ್ಥೆಯಿಂದ ಸಮರ್ಪಕವಾಗಿ ಪೂರ್ಣಗೊಳಿಸದ ಯಾವುದೇ ನೌಕರನನ್ನು ಮೇಲಿನ ಉನ್ನತ ಹುದ್ದೆಗೆ ಪದೋನ್ನತಿಗೊಳಿಸತಕ್ಕದ್ದಲ್ಲ.**

**ಸಹಕಾರಿ ನಿರ್ವಹಣೆಯಲ್ಲಿ ಹೆಚ್ಚಿನ ಡಿಪ್ಲೊಮಾ (ಹೆಚ್.ಡಿ.ಸಿ.ಎಮ್.), ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೋಮಾ (ಡಿ.ಸಿ.ಬಿ.ಎಮ್.) ಪಟ್ಟಣ ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೊಮಾ (ಡಿ.ಯು.ಸಿ.ಬಿ.ಎಮ್.) ಸಹಕಾರ ನಿರ್ವಹಣೆಯಲ್ಲಿ ಸಾಮಾನ್ಯ ಡಿಪ್ಲೊಮಾ (ಜೆ.ಡಿ.ಸಿ.) ಸಹಕಾರದಲ್ಲಿ ಡಿಪ್ಲೊಮಾ (ಡಿ.ಸಿ.ಎಮ್.)**

**ಮತ್ತು ಪರಂತು, ಬ್ಯಾಂಕಿನ ಆಡಳಿತ ಮಂಡಲಿಯು ಪ್ರತಿ ನೌಕರನನ್ನು ಮೇಲಿನ ತರಬೇತಿಗೆ ನಿಯೋಜಿಸತಕ್ಕದ್ದು. ಮತ್ತು ಆಡಳಿತ ಮಂಡಲಿಯು ತರಬೇತಿಗೆ ಹಾಜರಾಗಲು ಮತ್ತು ಪೂರ್ಣಗೊಳಿಸಲು ಯಾವುದೇ ವಿನಾಯಿತಿಯನ್ನು ನೀಡತಕ್ಕದ್ದಲ್ಲ.**

(ii) ಮುಖ್ಯ ಕಾರ್ಯನಿರ್ವಾಹಕನು ಅಥವಾ ಇತರ ಸಕ್ಷಮ ಪ್ರಾಧಿಕಾರವು ಒಬ್ಬ ನೌಕರನನ್ನು ಒಂದು ಹುದ್ದೆಯಿಂದ ಇನ್ನೊಂದು ಹುದ್ದೆಗೆ ವರ್ಗಾವಣೆ ಮಾಡಬಹುದು. ಆದರೆ, ಹಾಗೆ ಮಾಡುವಾಗ, ಹಣ ದುರುಪಯೋಗ, ಮೋಸ ಅಥವಾ ವಂಚನೆ, ಲೆಕ್ಕಗಳ ತಪ್ಪು ವರ್ಗೀಕರಣ ಇತ್ಯಾದಿ ಗುರುತರ ಅಕ್ರಮಗಳನ್ನು ಎಸಗಿರುವ ಆರೋಪ ಹೊತ್ತಿರುವ ನೌಕರನನ್ನು ಹೊರತುಪಡಿಸಿ, ಒಬ್ಬ ನೌಕರನು ಒಂದು ಹುದ್ದೆಯಲ್ಲಿ ಕನಿಷ್ಠ ಪಕ್ಷ ಮೂರು ವರ್ಷಗಳ ಸೇವೆ ಸಲ್ಲಿಸಿರುವುದನ್ನು ಖಾತರಿಪಡಿಸತಕ್ಕದ್ದು.

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

## # 120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577 001.

### ಕೆ.ಸಿ.ಎಸ್. ಕಾಯ್ದೆ 1960, ದಿನಾಂಕ 05-03-2018ರ ಮೇರೆಗೆ ಬ್ಯಾಂಕಿನ ಉಪನಿಬಂಧನೆಗಳಿಗೆ ಸೂಚಿಸಿರುವ ತಿದ್ದುಪಡಿಗಳು.

| ಬೈಲಾ ನಂ. | ಹಾಲಿ ಉಪ ನಿಬಂಧನೆಗಳು | ಸೂಚಿಸಿರುವ ತಿದ್ದುಪಡಿ | ತಿದ್ದುಪಡಿಗೆ ಕಾರಣ |
|---|---|---|---|
| **68**<br>(8) | **ನೌಕರರ ಸೇವಾ ಷರತ್ತುಗಳು :**<br>**ವರ್ಗಾವಣೆ ಮತ್ತು ಪದೋನ್ನತಿ :**<br>(i) ಯಾವುದೇ ಹುದ್ದೆಯ ನೇರ ಭರ್ತಿಗೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನುಳ್ಳ ಮತ್ತು ಆ ಹುದ್ದೆಯಲ್ಲಿ ಕನಿಷ್ಠ ಪಕ್ಷ ಐದು ವರ್ಷಗಳ ಸಮರ್ಪಕ ಸೇವೆಯನ್ನು ಸಲ್ಲಿಸಿರುವ ಒಬ್ಬ ನೌಕರನು ಬ್ಯಾಂಕಿನ ಕಾಡರ್ ಮತ್ತು ನೇಮಕಾತಿ ನಿಯಮಗಳನ್ವಯ ಉನ್ನತ ಹುದ್ದೆಗೆ ಪದೋನ್ನತಿಗಾಗಿ ಪರಿಗಣಿಸಲು ಅರ್ಹನಾಗತಕ್ಕದ್ದು.<br><br>ಪರಂತು, ಬ್ಯಾಂಕಿನ ಉದ್ದೇಶ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಈ ಕೆಳಗಿನ ಯಾವುದಾದರೊಂದು ವಿಷಯದ ಬಗ್ಗೆ ಡಿಪ್ಲೋಮಾವನ್ನು ಮಾನ್ಯತೆ ಪಡೆದ ಸಂಸ್ಥೆಯಿಂದ ಸಮರ್ಪಕವಾಗಿ ಪೂರ್ಣಗೊಳಿಸದ ಯಾವುದೇ ನೌಕರನನ್ನು ಮೇಲಿನ ಉನ್ನತ ಹುದ್ದೆಗೆ ಪದೋನ್ನತಿಗೊಳಿಸತಕ್ಕದ್ದಲ್ಲ.<br><br>ಸಹಕಾರಿ ನಿರ್ವಹಣೆಯಲ್ಲಿ ಹೆಚ್ಚಿನ ಡಿಪ್ಲೋಮಾ (ಹೆಚ್.ಡಿ.ಸಿ.ಎಮ್.), ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೋಮಾ (ಡಿ.ಸಿ.ಬಿ.ಎಮ್.) ಪಟ್ಟಣ ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೋಮಾ (ಡಿ.ಯು.ಸಿ.ಬಿ.ಎಮ್.) ಸಹಕಾರ ನಿರ್ವಹಣೆಯಲ್ಲಿ ಸಾಮಾನ್ಯ ಡಿಪ್ಲೋಮಾ (ಜೆ.ಡಿ.ಸಿ.) ಸಹಕಾರದಲ್ಲಿ ಡಿಪ್ಲೋಮಾ (ಡಿ.ಸಿ.ಎಮ್.)<br><br>ಮತ್ತು ಪರಂತು, ಬ್ಯಾಂಕಿನ ಆಡಳಿತ ಮಂಡಲಿಯು ಪ್ರತಿ ನೌಕರನನ್ನು ಮೇಲಿನ ತರಬೇತಿಗೆ ನಿಯೋಜಿಸತಕ್ಕದ್ದು. ಮತ್ತು ಆಡಳಿತ ಮಂಡಲಿಯು ತರಬೇತಿಗೆ ಹಾಜರಾಗಲು ಮತ್ತು ಪೂರ್ಣಗೊಳಿಸಲು ಯಾವುದೇ ವಿನಾಯಿತಿಯನ್ನು ನೀಡತಕ್ಕದ್ದಲ್ಲ. | **68 ನೌಕರರ ಸೇವಾ ಷರತ್ತುಗಳು :**<br>**(8) ವರ್ಗಾವಣೆ ಮತ್ತು ಪದೋನ್ನತಿ :**<br>(i) ಯಾವುದೇ ಹುದ್ದೆಯ ನೇರ ಭರ್ತಿಗೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನುಳ್ಳ ಮತ್ತು ಆ ಹುದ್ದೆಯಲ್ಲಿ ಕನಿಷ್ಠ ಪಕ್ಷ ಐದು ವರ್ಷಗಳ ಸಮರ್ಪಕ ಸೇವೆಯನ್ನು ಸಲ್ಲಿಸಿರುವ ಒಬ್ಬ ನೌಕರನು ಬ್ಯಾಂಕಿನ ಕಾಡರ್ ಮತ್ತು ನೇಮಕಾತಿ ನಿಯಮಗಳನ್ವಯ ಉನ್ನತ ಹುದ್ದೆಗೆ ಪದೋನ್ನತಿಗಾಗಿ ಪರಿಗಣಿಸಲು ಅರ್ಹನಾಗತಕ್ಕದ್ದು.<br><br>ಪರಂತು, ಜುಲೈ 29, 2019 ರ ನಂತರ ಬ್ಯಾಂಕಿನ ಉದ್ದೇಶ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಈ ಕೆಳಗಿನ ಯಾವುದಾದರೊಂದು ವಿಷಯದ ಬಗ್ಗೆ ಡಿಪ್ಲೋಮಾವನ್ನು ಮಾನ್ಯತೆ ಪಡೆದ ಸಂಸ್ಥೆಯಿಂದ ಸಮರ್ಪಕವಾಗಿ ಪೂರ್ಣಗೊಳಿಸದ ಯಾವುದೇ ನೌಕರನನ್ನು ಮೇಲಿನ ಉನ್ನತ ಹುದ್ದೆಗೆ ಪದೋನ್ನತಿಗೊಳಿಸತಕ್ಕದ್ದಲ್ಲ.<br><br>ಸಹಕಾರಿ ನಿರ್ವಹಣೆಯಲ್ಲಿ ಹೆಚ್ಚಿನ ಡಿಪ್ಲೋಮಾ (ಹೆಚ್.ಡಿ.ಸಿ.ಎಮ್.), ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೋಮಾ (ಡಿ.ಸಿ.ಬಿ.ಎಮ್.) ಪಟ್ಟಣ ಸಹಕಾರ ಬ್ಯಾಂಕಿಂಗ್ ನಿರ್ವಹಣೆಯಲ್ಲಿ ಡಿಪ್ಲೋಮಾ (ಡಿ.ಯು.ಸಿ.ಬಿ.ಎಮ್.) ಸಹಕಾರ ನಿರ್ವಹಣೆಯಲ್ಲಿ ಸಾಮಾನ್ಯ ಡಿಪ್ಲೋಮಾ (ಜೆ.ಡಿ.ಸಿ.) ಸಹಕಾರದಲ್ಲಿ ಡಿಪ್ಲೋಮಾ (ಡಿ.ಸಿ.ಎಮ್.)<br><br>ಮತ್ತು ಪರಂತು, ಬ್ಯಾಂಕಿನ ಆಡಳಿತ ಮಂಡಲಿಯು ಪ್ರತಿ ನೌಕರನನ್ನು ಮೇಲಿನ ತರಬೇತಿಗೆ ನಿಯೋಜಿಸತಕ್ಕದ್ದು. ಮತ್ತು ಆಡಳಿತ ಮಂಡಲಿಯು ತರಬೇತಿಗೆ ಹಾಜರಾಗಲು ಮತ್ತು ಪೂರ್ಣಗೊಳಿಸಲು ಯಾವುದೇ ವಿನಾಯಿತಿಯನ್ನು ನೀಡತಕ್ಕದ್ದಲ್ಲ. | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1960, ದಿನಾಂಕ 05-03-2018ರ ಸೂಕ್ತ ತಿದ್ದುಪಡಿ ಮೇರೆಗೆ |

## ಜಾಮೀನುದಾರರ ಜವಾಬ್ದಾರಿ ಮತ್ತು ಕರ್ತವ್ಯಗಳು

1. ಪ್ರತಿಯೊಬ್ಬ ಜಾಮೀನುದಾರನು ಸಾಲಗಾರನಷ್ಟೇ ಸಾಲದ ಮರುಪಾವತಿಗೆ ಜವಾಬ್ದಾರನಾಗಿರುತ್ತಾನೆ.
2. ಜಾಮೀನು ಕೊಡುವ ಮೊದಲು ಸಾಲಗಾರನ ಆರ್ಥಿಕ ಸ್ಥಿತಿ, ಸಾಲದ ಉದ್ದೇಶ ಮತ್ತು ಸಾಲದ ಕಂತುಗಳನ್ನು ಪಾವತಿಸುವ ಸಾಮರ್ಥ್ಯದ ಬಗ್ಗೆ ತಿಳಿದುಕೊಂಡಿರಬೇಕು.
3. ಕಾಲ ಕಾಲಕ್ಕೆ ಸಾಲಗಾರನು ಕಂತುಗಳನ್ನು ಭರ್ತಿ ಮಾಡಿರುವರೋ ಹೇಗೆ ಎಂಬುದನ್ನು ವಿಚಾರಿಸಬೇಕು.
4. ಬ್ಯಾಂಕಿನ ಆಡಳಿತ ಮತ್ತು ಜಾಮೀನುದಾರನ ಹಾಗೂ ಸಾಲಗಾರನ ಸಹಕಾರದಿಂದ ಈ ಕೆಲಸ ನಿರಂತರ ನಡೆಯಬೇಕಾದುದು. ಎಲ್ಲರ–ಹಿತವೂ ಇದರಲ್ಲಿ ಅಡಗಿದೆ. ಈ ಮಾರ್ಗದಲ್ಲಿ ಎಲ್ಲರೂ ಸದಾಕಾಲ ಕಾರ್ಯೋನ್ಮುಖರಾಗಿರಬೇಕು.
5. ಒಬ್ಬ ಸದಸ್ಯ ಇಬ್ಬರಿಗಿಂತ ಹೆಚ್ಚು ಜನರಿಗೆ ಜಾಮೀನು ಹಾಕಬಾರದು.
6. ಬ್ಯಾಂಕಿನ ಸಾಲಗಾರರು ಕಟ್–ಬಾಕಿದಾರರಾದರೆ ಅವರ ಜಾಮೀನುದಾರರಿಗೂ ಸಾಲ ಪಡೆಯಲು ಹಕ್ಕು ಇರುವುದಿಲ್ಲ. ಆದುದರಿಂದ ಜಾಮೀನುದಾರರಾಗುವವರು ಮುಂಚಿತವಾಗಿ ಮೇಲಿನ ಅಂಶಗಳನ್ನು ಗಮನದಲ್ಲಿರಿಸಬೇಕು.

## ಸದಸ್ಯರ ಗಮನಕ್ಕೆ

1. ವಾರ್ಷಿಕ ಮಹಾಸಭೆಯಲ್ಲಿ ಘೋಷಿಸಿದ 2016–17ನೇ ಸಾಲಿನ ಡಿವಿಡೆಂಡ್ ಮೊತ್ತವನ್ನು ಸದಸ್ಯರ ಉಳಿತಾಯ ಖಾತೆಗೆ ಜಮಾ ಮಾಡಲಾಗಿದೆ. ಡಿವಿಡೆಂಡ್ ಪಡೆಯದೇ ಇರುವ ಸದಸ್ಯರುಗಳು ಉಳಿತಾಯ ಖಾತೆಯನ್ನು ತೆರೆದು ಡಿವಿಡೆಂಡ್ ಪಡೆಯಲು ವಿನಂತಿಸಲಾಗಿದೆ. ಇಲ್ಲವಾದಲ್ಲಿ ಉಪವಿಧಿಗಳನ್ವಯ 3 ವರ್ಷ ಗತಿಸಿದ ಡಿವಿಡೆಂಡ್ ಹಣವನ್ನು ಬ್ಯಾಂಕಿನ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.
2. ಷೇರುದಾರರು ತಮ್ಮ ಇತ್ತೀಚಿನ ವಿಳಾಸವನ್ನು ಬ್ಯಾಂಕಿಗೆ ತಪ್ಪದೇ ತಿಳಿಸಬೇಕು.
3. ಸದಸ್ಯರು ತಮ್ಮ ಇತ್ತೀಚಿನ ಪಾಸ್‌ಪೋರ್ಟ್ ಸೈಜಿನ ಮೂರು ಭಾವಚಿತ್ರಗಳನ್ನು (ಫೋಟೋ) ಸಲ್ಲಿಸಿ ಸದಸ್ಯತ್ವದ ಗುರುತಿನ ಪತ್ರ ( Identity Card) ಪಡೆಯಬೇಕು. ಇದು ಕಡ್ಡಾಯವಾಗಿರುತ್ತದೆ.
4. ತಿದ್ದುಪಡಿಯಾದ ಸಹಕಾರ ಸಂಘಗಳ ಕಾಯ್ದೆ ಮತ್ತು ಬ್ಯಾಂಕಿನ ಉಪವಿಧಿಗಳನ್ವಯ ಪ್ರತಿ ಸದಸ್ಯನು ಕನಿಷ್ಠ ರೂ. 1000/–ಗಳ ಷೇರು ಹಣ ಮತ್ತು ಉಳಿತಾಯ ಖಾತೆಯನ್ನು ಹೊಂದಿ ಕನಿಷ್ಠ 5 ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವುದರ ಜೊತೆಗೆ ಕನಿಷ್ಠ ರೂ. 5000/–ಗಳ ಠೇವಣಿ ಕಡ್ಡಾಯವಾಗಿರುತ್ತದೆ. ಪ್ರಯುಕ್ತ ಪ್ರತಿ ಸದಸ್ಯನು ಕನಿಷ್ಠ ಸೇವಾ ಸೌಲಭ್ಯಗಳನ್ನು ಪಡೆಯುವುದರ ಜೊತೆಗೆ 5 ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಠ 3 ವಾರ್ಷಿಕ ಮಹಾಸಭೆಗಳಿಗೆ ಹಾಜರಾಗುವ ಮೂಲಕ ಬ್ಯಾಂಕಿನ ಅರ್ಹ ಸದಸ್ಯರಾಗಿ ಮುಂದುವರೆಯಬೇಕೆಂದು ವಿನಂತಿಸಲಾಗಿದೆ.
5. ಸದಸ್ಯರು ತಾವು ಪಡೆದ ಸಾಲದ ಕಂತುಗಳನ್ನು ಮತ್ತು ಬಡ್ಡಿಯನ್ನು ಪ್ರತಿ ತಿಂಗಳು ಜಮಾ ಮಾಡಬೇಕು.
6. ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಸದಸ್ಯರಾದವರಿಗೆ ಅವಧಿ ಠೇವಣಿಗಳ ಮೇಲೆ ಕೊಡತಕ್ಕ ಬಡ್ಡಿಯಲ್ಲಿ ಬ್ಯಾಂಕುಗಳು ಮೂಲದಲ್ಲಿಯೇ ಆದಾಯ ಕರ ಕಡಿತಗೊಳಿಸಲು ಇದ್ದ ವಿನಾಯಿತಿ ಈಗ ರದ್ದಾಗಿದ್ದು ವರ್ಷಕ್ಕೆ ರೂ. 10,000/– (ಏಪ್ರಿಲ್‌ನಿಂದ ಮಾರ್ಚ್‌ವರೆಗೆ) ಕ್ಕಿಂತ ಹೆಚ್ಚು ಬಡ್ಡಿ ಬಂದರೆ ಶೇಕಡಾ 10 ರಂತೆ ಪಾನ್ ಕಾರ್ಡ್ ಕೊಟ್ಟವರಿಗೆ (ಪಾನ್ ಕಾರ್ಡ್ ಕೊಡದಿದ್ದರೆ ಶೇಕಡಾ 20 ರಂತೆ) ಕಡಿತಗೊಳಿಸಿ ಆದಾಯ ಕರ ಕಛೇರಿಗೆ ಜಮಾ ಮಾಡಬೇಕಾಗುತ್ತದೆ. ಈ ಟಿ.ಡಿ.ಎಸ್. ಕಾನೂನು 2015 ರ ಜೂನ್ ಒಂದನೇ ತಾರೀಖಿನಿಂದ ಜಾರಿಯಲ್ಲಿ ಬಂದಿದೆ. ತಾವು ಆದಾಯಕರ ವ್ಯಾಪ್ತಿಗೆ ಬಾರದೇ ಇದ್ದಲ್ಲಿ ಫಾರಂ ನಂ. 15ಜಿ ಇಲ್ಲವೇ 15ಹೆಚ್ ಹೊಸ ನಮೂನೆ ಫಾರಂಗಳನ್ನು ಕಡ್ಡಾಯವಾಗಿ ಮುಂಗಡವಾಗಿ ಕೊಡಬೇಕಾಗುತ್ತದೆ.